ಧಾರವಾಡ * ಕಾರವಾರ * ಹಾವೇರಿ * ಕೊಪ್ಪಳ * ಬಳ್ಳಾರಿ * ಬಾಗಲಕೋಟ * ವಿಜಯನಗರ * ಗದಗದಿಂದ ಏಕ ಕಾಲಕ್ಕೆ ಒಂದೇ ಸಂಚಿಕೆ ಪ್ರಕಟಗೊಳ್ಳುವ ದಿನ ಪತ್ರಿಕೆ



# ಸ್ನೇಹ ಜೀವಿ

ಉತ್ತರ ಕರ್ನಾಟಕದ ಧ್ವನಿ...!

SNEHAJEEVI KANNADA DAILY

ಕನ್ನಡ ದಿನಪತ್ರಿಕೆ




ಡಾ. ಎ.ಎನ್. ಶಾಲಗಾರ ಸಾರಥ್ಯದಲ್ಲಿ | MAG: PRBCR-10/2016-17 | Mob: 94827 70999 | e-mail: snehajeevidaily@gmail.com | Editor: Dr. A.N. Shalagar

RNI NO. KARKAN/2013/49379 | Volume / ಸಂಪುಟ : 14| Issue / ಸಂಚಿಕೆ : Date : 13-02-2026 ಶುಕ್ರವಾರ Page / ಪುಟ : 4 | ಗದಗ–GADAG | Rs. 2/-

ಪುಟ -4 ಡಕಾಯಿತಿ ಕೇಸ್‌ನಲ್ಲಿ ಕಾನ್‌ಸ್ಟೆಬಲ್ ಬಂಧನ !

ಪುಟ -3 ಶಕ್ತಿ ಯೋಜನೆ: ಮಹಿಳೆಯರ ಚಲನವಲನಕ್ಕೆ ಹೊಸ ಶಕ್ತಿ

ಪುಟ -2 ಕಾರ್ಮಿಕರು ಕಾಯಕದಿಂದ ಸಂತೃಪ್ತಿ ಕಾಣುವವರು : ನಾಗರಾಜ ಶೆಟ್ಟಿ

ಪುಟ -4 ಗಾಂಧೀಜಿ ಕಂಡ ಗ್ರಾಮ ಸ್ವರಾಜ್ ನನಸಾಗಲಿ : ಡಿ.ಆರ್.ಪಾಟೀಲ

## ರಾಜ್ಯಕ್ಕೆ ಬ್ಯಾಡ್ ನ್ಯೂಸ್: ಕಾಂಗ್ರೆಸ್ ಸರ್ಕಾರಕ್ಕೆ ಬಿಗ್ ಶಾಕ್ ಕೊಟ್ಟ ಕೇಂದ್ರ!




❑ ಸ್ನೇಹಜೀವಿ ನ್ಯೂಸ್

ಬೆಂಗಳೂರು, ಫೆ.12: ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕೇಂದ್ರ ಸರ್ಕಾರ ಬಿಗ್ ಶಾಕ್ ಕೊಟ್ಟಿದೆ. ಮೆಟ್ರೋ ದರ ಏರಿಕೆ ಜಟಾಪಟಿ ಬೆನ್ನಲ್ಲೇ ರಾಜ್ಯಕ್ಕೆ ಎರಡೆರಡು ಬ್ಯಾಡ್ ನ್ಯೂಸ್ ನೀಡಿದೆ. ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕೇಂದ್ರ ಸರ್ಕಾರ ಬಿಗ್ ಶಾಕ್ ನೀಡಿದೆ. ಮೆಟ್ರೋ ದರ ಏರಿಕೆ ಜಟಾಪಟಿ ಬೆನ್ನಲ್ಲೇ ರಾಜ್ಯಕ್ಕೆ ಬ್ಯಾಡ್ ನ್ಯೂಸ್ ನೀಡಿದೆ. ಬೆಂಗಳೂರಿನ ಮೆಟ್ರೋ ವಿಸ್ತರಣೆ ಯೋಜನೆಗೆ ಕೇಂದ್ರ ಸರ್ಕಾರದಿಂದ ಮತ್ತೊಮ್ಮೆ ದೊಡ್ಡ ಆಘಾತ ಬಂದಿದೆ. ಸರ್ಜಾಪುರದಿಂದ ಹೆಬ್ಬಾಳದವರೆಗೆ ಸಾಗಲಿರುವ ರೆಡ್ ಲೈನ್ ಮೆಟ್ರೋ ಕಾರಿಡಾರ್‌ಗೆ ಕೇಂದ್ರ ಸರ್ಕಾರ ಬ್ರೇಕ್ ಹಾಕಿದೆ. ಜೊತೆಗೆ ಡಬಲ್ ಡೆಕ್ಕರ್ ಫ್ಲೈಓವರ್ ಯೋಜನೆಗೂ ನಿರಾಕರಣೆ ನೀಡಿದೆ.

ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ರಾಜ್ಯ ಸರ್ಕಾರದ ಯೋಜನೆಗೆ ಬ್ರೇಕ್ ಬಿದ್ದಿದ್ದು, ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ಮತ್ತು ರಾಜ್ಯ ಸರ್ಕಾರಕ್ಕೆ ದೊಡ್ಡ ಶಾಕ್ ಆಗಿದೆ. ಮೆಟ್ರೋ ದರ ಏರಿಕೆ ಜಟಾಪಟಿ ಬೆನ್ನಲ್ಲೇ ಈ ನಿರ್ಧಾರ ಬಂದಿದೆ.

ಮೆಟ್ರೋ ರೆಡ್ ಲೈನ್ ಗೆ ಬ್ರೇಕ್ ಹಾಕಿದ ಕೇಂದ್ರ!:ಕೇಂದ್ರ ಸರ್ಕಾರದ ಪ್ರಕಾರ, ಡಬಲ್ ಡೆಕ್ಕರ್ ವ್ಯವಸ್ಥೆ ಮಾಡಿದರೆ ಮೆಟ್ರೋ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತದೆ. ಇದರಿಂದ ಯೋಜನೆಯ ಆರ್ಥಿಕ ಸಾಧ್ಯತೆ ಕುಸಿಯುತ್ತದೆ ಎಂದು ಕೇಂದ್ರ ಸರ್ಕಾರ ನಂಬಿದೆ. ಹಾಗಾಗಿ ಸಂಪೂರ್ಣ ರೆಡ್ ಲೈನ್ ಗೆ ಬ್ರೇಕ್ ಹಾಕಿದೆ. ಡಬಲ್ ಡೆಕ್ಕರ್ ಮಾಡುವುದಕ್ಕೆ ನೋ ಎಂದು ಹೇಳಿದೆ. ಆದರೆ ಕೆಲವು ಆಯ್ದ ಜಂಕ್ಷನ್‌ಗಳಲ್ಲಿ ಮಾತ್ರ ಡಬಲ್ ಡೆಕ್ಕರ್ ಅನುಮತಿಸಬಹುದು ಎಂದು ಸೂಚನೆ ನೀಡಿದೆ.

## ಚೂರು ಸುದ್ದಿ

### ವಿಷ ಸೇವಿಸಿ ರೈತ ಆತ್ಮಹತ್ಯೆ



❑ ಸ್ನೇಹಜೀವಿ ನ್ಯೂಸ್

ಲಕ್ಷ್ಮೇಶ್ವರ: ಸಾಲಬಾಧೆಗೆ ಮನನೊಂದು ವಿಷ ಸೇವಿಸಿ ರೈತ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಕುಂದ್ರಳ್ಳಿ ಗ್ರಾಮದಲ್ಲಿ ನಡೆದಿದೆ.

ಬಸವರಾಜ ಶಿವಪ್ಪ ಮೇಟಿ (40) ಆತ್ಮಹತ್ಯೆ ಮಾಡಿಕೊಂಡ ರೈತ. ಬಸವರಾಜ ಬ್ಯಾಂಕಿನಲ್ಲಿ ಕೃಷಿ ಸಾಲ ಮಾಡಿದ್ದರು. ಅಲ್ಲದೆ, ಜೀವನ ನಿರ್ವಹಣೆ, ಮಕ್ಕಳ ಶಿಕ್ಷಣಕ್ಕಾಗಿ ಕೈ ಸಾಲವನ್ನೂ ಮಾಡಿದ್ದರು. ನಾಲ್ಕೈದು ವರ್ಷಗಳಿಂದ ಕೃಷಿಯಿಂದ ಲಾಭದ ಬದಲಾಗಿ ನಷ್ಟ ಉಂಟಾಗಿತ್ತು.

ಇದೀಗ ಸಾಲ ತೀರಿಸುವ ಜತೆಗೆ ಮಕ್ಕಳ ಶಿಕ್ಷಣ, ಕುಟುಂಬ ನಿರ್ವಹಣೆ ಮಾಡುವುದು ಹೇಗೆಂಬ ಚಿಂತೆಯಿಂದ ಮನನೊಂದು ಹೊಲದಲ್ಲಿ ವಿಷ ಸೇವಿಸಿದ್ದರು. ಚಿಕಿತ್ಸೆಗಾಗಿ ಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ರೈತ ಮೃತಪಟ್ಟಿದ್ದಾರೆ. ಶಿರಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಡಳಿತದಲ್ಲಿ ಡಿಐಜಿ ಹಸ್ತಕ್ಷೇಪ




❑ ಸ್ನೇಹಜೀವಿ ನ್ಯೂಸ್


ಬಳ್ಳಾರಿ : ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕಿಯಾಗಿದ್ದ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್, ನಗರದ ಬ್ಯಾನರ್ ಗಲಾಟೆ ಪ್ರಕರಣದಲ್ಲಿ ವರ್ಗಾವಣೆಗೊಂಡ ಬಳಿಕವೂ ಕೆಳ ಹಂತದ ಅಧಿಕಾರಿಯೊಬ್ಬ–ರಿಗೆ ಕರೆ ಮಾಡಿ ಕಡತಗಳ ವಿಚಾರದಲ್ಲಿ ಮೌಖಿಕ ಸೂಚನೆ ನೀಡಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಬಳ್ಳಾರಿಯ ವಲಯದ ಸಹಾಯಕ ಆಡಳಿತಾಧಿಕಾರಿ ಬಸವರಾಜ್ ಅವರಿಗೆ ಫೆ.4ರಂದು ವಾಟ್ಸ್ ಆಪ್ ಕರೆ ಮಾಡಿರುವ ಕಟಿಯಾರ್ ಅವರು, ನನ್ನ ವರ್ಗಾವಣೆ ವಿಚಾರ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಯಲ್ಲಿದೆ (ಸಿಎಟಿ) ಪ್ರಮುಖ ಕಡತಗಳನ್ನು ಈಗಿನ ಅಧಿಕಾರಿಗಳಿಗೆ ನೀಡಬಾರದು, ಹಾಗೇನಾದರೂ ಮಾಡಿದರೆ ಸಿಎಟಿಯಲ್ಲಿ ತಮ್ಮನ್ನೂ ಪ್ರತಿವಾದಿಯನ್ನಾಗಿ ಮಾಡಲಾಗುವುದು ಎಂಬುದಾಗಿ ಎಚ್ಚರಿಕೆ ನೀಡಿರುವ ವಿಡಿಯೋ ಹರಿದಾಡಿದೆ. ಪೂರಕವಾಗಿ ಬಸವರಾಜ್ ಅವರು, ವರ್ತಿಕಾ ಕಟಿಯಾರ್ ಅವರಿಗೆ ಪತ್ರ ಬರೆದಿದ್ದು, ನಿಮ್ಮ ನಿರ್ದೇಶನಗಳು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸುವ ಉದ್ದೇಶ ಹೊಂದಿವೆ. ಮುಂದೆ ಯಾವುದೇ ರೀತಿಯ ಕರೆಗಳು, ಪತ್ರಗಳು ಯಾರಿಂದಲಾದರೂ ಮೌಖಿಕವಾಗಿ ಸೂಚಿಸುವ ರೀತಿಯಲ್ಲಿ ತಿಳಿ ಹೇಳುವುದು ಬೇಡ ಎಂದು ಕೋರಿದ್ದಾರೆ. ಸದ್ಯ, ವರ್ತಿಕಾ ಕಟಿಯಾರ್ ಅವರು ವರ್ಗಾವಣೆ ಪ್ರಶ್ನಿಸಿ ಸಿಎಟಿಗೆ ಮೇಲ್ಮನವಿ ಸಲ್ಲಿಸಿದ್ದಾರೆ.

## ಪಿಡಬ್ಲ್ಯೂಡಿ ಮುಖ್ಯ ಇಂಜಿನಿಯರ್‌ಗೆ ಶಾಕ್ ಕೊಟ್ಟ ಲೋಕಾಯುಕ್ತ:

### ಅಧಿಕಾರಿಗಳಿಂದ 11 ಕಡೆ ಶೋಧ





❑ ಸ್ನೇಹಜೀವಿ ನ್ಯೂಸ್

ಬೆಂಗಳೂರು, ಫೆ.12: ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯೂಡಿ) ಕೆ–ಶಿಪ್ ವಿಭಾಗದ ಮುಖ್ಯ ಇಂಜಿನಿಯರ್ ಪುರುಷೋತ್ತಮ್ ದಾಸ್ ಹೆಗಡೆ ಅವರಿಗೆ ಸಂಬಂಧಿಸಿದ ಬೆಂಗಳೂರು ಮತ್ತು ಮೈಸೂರಿನ ಒಟ್ಟು 11 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ಈ ತನಿಖೆಯನ್ನು ಕೈಗೊಳ್ಳಲಾಗಿದೆ. ಬೆಂಗಳೂ–ರಿನ ಎರಡು ಸ್ಥಳಗಳು ಮತ್ತು ಮೈಸೂರಿನ ಐದಾರು ಸ್ಥಳಗಳು ಸೇರಿದಂತೆ ಒಟ್ಟು 11 ಕಡೆಗಳಲ್ಲಿ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಪುರುಷೋತ್ತಮ್ ದಾಸ್ ಹೆಗಡೆ ಅವರು ತಮ್ಮ ಆದಾಯದ ಮೂಲಗಳಿಗೆ ತಕ್ಕಂತೆ ಆಸ್ತಿಯನ್ನು ಹೊಂದಿಲ್ಲ ಎಂಬುದು ಕಂಡುಬಂದಿದೆ.

ದಾಳಿಯ ವೇಳೆ, ನಗದು, ಚಿನ್ನಾಭರಣ, ಬ್ಯಾಂಕ್ ಬ್ಯಾಲೆನ್ಸ್ ಸೇರಿದಂತೆ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಇದರಲ್ಲಿ ಸೈಟ್‌ಗಳು, ಮನೆಗಳು, ಯೋಜನೆಗಳು, ವಿವಿಧ ಕಂಪನಿಗಳಲ್ಲಿನ ಹೂಡಿಕೆಗಳು, ಮತ್ತು ಎರಡು ಶಾಲೆಗಳನ್ನು ಒಳಗೊಂಡಿರುವ ಟ್ರಸ್ಟ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಸಂಪೂರ್ಣ ತನಿಖೆಯ ನಂತರ ವಿವರವಾದ ವರದಿಯನ್ನು ಸಲ್ಲಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

## ಗ್ಯಾಸ್ ಕಟರ್ ಬಳಸಿ ಎಟಿಎಂ ದರೋಡೆ

### ಶಿಗ್ಗಾಂವಿ ತಾಲೂಕು ಹನುಮರಳ್ಳಿ ಎಟಿಎಂನಲ್ಲಿ ಕಳ್ಳತನ

ಹಾವೇರಿ: ಸಿಸಿಟಿವಿ ಕ್ಯಾಮರಾಗಳಿಗೆ ಬಿಳಿ ಬಣ್ಣ ಸಿಂಪಡಣೆ ಮಾಡಿ, ಗ್ಯಾಸ್ ಕಟರ್ ಬಳಸಿ ಎಟಿಎಂ ಯಂತ್ರ ಕೊರೆದು 4.66 ಲಕ್ಷ ರೂ. ಕದ್ದು ಪರಾರಿಯಾಗಿರುವ ಘಟನೆ ಜಿಲ್ಲೆಯ ಶಿಗ್ಗಾಂವಿ ತಾಲೂಕು ಹನುಮರಳ್ಳಿ ಗ್ರಾಮದಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.

ಗ್ರಾಮದ ಹೊರವಲಯದಲ್ಲಿರುವ ಯೂನಿಯನ್ ಬ್ಯಾಂಕ್ ಶಾಖೆಯ ಎಟಿಎಂ ಯಂತ್ರ ಹಾನಿಗೊಳಿಸಿ ಹಣ ದೋಚಲಾಗಿದೆ.ಸಿಸಿಟಿವಿ ಕ್ಯಾಮರಾದಲ್ಲಿ ನಾಲ್ವರು ಸೆರೆಯಾಗಿದ್ದಾರೆ. ಆದರೆ, ಅವರು ಮುಖಕ್ಕೆ ಮಾಸ್ಕ್ ಧರಿಸಿದ್ದರು. 4 ಕ್ಯಾಮರಾಗಳಿಗೆ ಬಿಳಿ ಬಣ್ಣ ಸ್ಪ್ರೇ ಮಾಡಿ, ಕಳವು ಮಾಡಿದ್ದಾರೆ. ಸ್ಥಳಕ್ಕೆ ಡಿವೈಎಸ್‌ಪಿ ಗುರುಶಾಂತಪ್ಪ ಹಾಗೂ ಇತರ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ತಪಾಸಣೆ ನಡೆಸಿದರು. ಶಿಗ್ಗಾಂವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ತೆಗೆ ತಂಡ ರಚನೆ: ಇತ್ತೀಚೆಗೆ ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಿ ಎಲ್ಲ ಬ್ಯಾಂಕ್ ಮತ್ತು ಎಟಿಎಂಗಳಲ್ಲಿ ಅಗತ್ಯ ಭದ್ರತೆ ಕೈಗೊಳ್ಳಲು ಸೂಚಿಸಲಾಗಿತ್ತು. ಭದ್ರತಾ ಸಿಬ್ಬಂದಿ ನೇಮಕ, ಸಿಸಿಟಿವಿ ಕ್ಯಾಮರಾ ಹಾಗೂ ಅಲಾರಾಂ ಅಳವಡಿಸಲು ಸೂಚಿಸಲಾಗಿತ್ತು. ಆದರೂ ಕೆಲವರು ಈ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ.



ಕಳ್ಳತನವಾದ ಎಟಿಎಂನಲ್ಲಿ ಅಲಾರಾಂ ಇರಲಿಲ್ಲ. ಕಳ್ಳರ ಪತ್ತೆಗೆ ತಂಡ ರಚಿಸಲಾಗಿದೆ ಎಂದು ಎಸ್‌ಪಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

## ಗದಗ ಅಂಗನವಾಡಿಗಳಲ್ಲಿ ಪೌಷ್ಠಿಕ ಆಹಾರ ಕೊರತೆ


❑ ಸ್ನೇಹಜೀವಿ ನ್ಯೂಸ್

ಗದಗ : ಜಿಲ್ಲೆಯ ಅಂಗನವಾಡಿಗಳಲ್ಲಿ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರಿಗೆ ಪೌಷ್ಠಿಕ ಆಹಾರದ ಕೊರತೆ ಎದುರಾಗಿದೆ. ಮುಂಡರಗಿ ತಾಲೂಕಿನ ಚುರ್ಚಿಹಾಳ ಗ್ರಾಮದ ಅಂಗನವಾಡಿಗಳಲ್ಲಿ ಜನವರಿ ತಿಂಗಳ ಮೊಟ್ಟೆ ಹಣ ಫೆಬ್ರವರಿ 11ರವರೆಗೂ ಬಿಡುಗಡೆಯಾಗಿಲ್ಲ. ಇದರ ಪರಿಣಾಮವಾಗಿ, ಒಂದು ಮೊಟ್ಟೆಯನ್ನು ಮೂರು ಮಕ್ಕಳಿಗೆ ಹಂಚಲಾಗುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಮೊಟ್ಟೆ ಮತ್ತು ಹಾಲಿಗೆ ಕೊರತೆ ಜೊತೆಗೆ ಮಕ್ಕಳ ಅನ್ನಕ್ಕೂ ಕನ್ನ ಹಾಕಲಾಗುತ್ತಿದೆ ಎಂದು ಹೇಳಲಾಗಿದೆ. ಅಲ್ಲದೆ, ಪೂರೈಕೆಯಾಗುವ ಗೋಧಿಯಲ್ಲಿ ನುಸಿಗಳಿದ್ದು, ಕಳಪೆ ಆಹಾರ ನೀಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಘಟನೆಗಳಿಂದ ಆಕ್ರೋಶಗೊಂಡಿರುವ ಗ್ರಾಮಸ್ಥರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿರುದ್ಧ ಧ್ವನಿ ಎತ್ತಿದ್ದಾರೆ. ಅಧಿಕಾರಿಗಳು ಅನುದಾನ ಬಿಡುಗಡೆ ಮಾಡದಿರುವುದು ಅಥವಾ ಬಿಡುಗಡೆಯಾದ ಅನುದಾನ ಅಂಗನವಾಡಿಗಳಿಗೆ ತಲುಪದಿರುವುದು ಈ ಸಮಸ್ಯೆಗಳಿಗೆ ಕಾರಣ ಎನ್ನಲಾಗಿದೆ.

## ವಿಜಯ್ ಮಲ್ಯಗೆ 'ಲಾಸ್ಟ್ ಚಾನ್ಸ್'! ಬಾಂಬೆ ಹೈಕೋರ್ಟ್ ಕೊಟ್ಟ ಎಚ್ಚರಿಕೆ ಏನು?

**ಭಾರತದಿಂದ ಪರಾ–ರಿಯಾಗಿರುವ ಖ್ಯಾತ ಉದ್ಯಮಿ ವಿಜಯ್ ಮಲ್ಯಗೆ ಬಾಂಬೈ ಹೈಕೋರ್ಟ್ ಅಂತಿಮ ಅವಕಾಶ ನೀಡಿದೆ. ನೀಡಿದೆ. ಭಾರತಕ್ಕೆ ಯಾವಾಗ ಮರಳುತ್ತೀರಿ ಎಂಬುದನ್ನು ಸ್ಪಷ್ಟಪಡಿಸದೇ ಹೋದರೆ ಅವರ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಲಾಗುವುದಿಲ್ಲ ಎಂದು ಎಚ್ಚರಿಸಿತು.**




❑ ಸ್ನೇಹಜೀವಿ ನ್ಯೂಸ್

ಮುಂಬೈ: ಭಾರತದಿಂದ ಪರಾ–ರಿಯಾಗಿರುವ ಖ್ಯಾತ ಉದ್ಯಮಿ ವಿಜಯ್ ಮಲ್ಯಗೆ ಬಾಂಬೈ ಹೈಕೋರ್ಟ್ 'ಅಂತಿಮ ಅವಕಾಶ' (ಐಚಿಣ ಅಛಿಚಿಟಿಛಿಜ) ನೀಡಿದೆ. ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ನ್ಯಾಯಮೂರ್ತಿ ಗೌತಮ್ ಅಂಕಡ್ ಅವರಿದ್ದ ಬಾಂಬೆ ಹೈಕೋರ್ಟ್‌ನ ದ್ವಿಸದಸ್ಯ ಪೀಠವು ವಿಜಯ್ ಮಲ್ಯ ಅವರಿಗೆ ಭಾರತಕ್ಕೆ ಮರಳಲು ಉದ್ದೇಶಿಸಿದ್ದೀರಾ ಎಂಬುದನ್ನು ಸ್ಪಷ್ಟಪಡಿಸಲು ಲಾಸ್ಟ್ ಚಾನ್ಸ್ ನೀಡಿದೆ. ಭಾರತಕ್ಕೆ ಯಾವಾಗ ಮರಳುತ್ತೀರಿ ಎಂಬುದನ್ನು ಸ್ಪಷ್ಟಪಡಿಸದೇ ಹೋದರೆ ಅವರ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಲಾಗುವುದಿಲ್ಲ ಎಂದು ಎಚ್ಚರಿಸಿತು.

"ಮಲ್ಯ ವಿರುದ್ಧ ನ್ಯಾಯಪೀಠ ಗರಂ"

ಭಾರತದಿಂದ ಪರಾರಿಯಾಗಿರುವ ಉದ್ಯಮಿ ವಿಜಯ್ ಮಲ್ಯ ಅವರು ನ್ಯಾಯಾಲಯದ ಪ್ರಕ್ರಿಯೆಯನ್ನು ತಪ್ಪಿಸುತ್ತಿದ್ದಾರೆ ಎಂದು ಬಾಂಬೈ ಹೈಕೋರ್ಟ್ ಗರಂ ಆಗಿದೆ. ಅವರ ಅರ್ಜಿ ವಿಚಾರಣೆಯಲ್ಲಿ ಸಮಾನ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ ಎಂದು ಬಾಂಬೆ ಹೈಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿದೆ.

### ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ:

ವಿಜಯ್ ಮಲ್ಯ ಅವರು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಮತ್ತು ಆದ್ದರಿಂದ ಸಮಾನತೆಯ ಲಾಭ ಪಡೆಯಲು ಸಾಧ್ಯವಿಲ್ಲ ಎಂದು ದಾಖಲಿಸಲು ಅವರು ಒಲವು ತೋರಿದ್ದಾರೆ ಎಂದು ನ್ಯಾಯಾಧೀಶರು ಹೇಳಿದರು.

## ಫಾರಿನ್ ಟ್ರಿಪ್‌ಗೆ ಕಳಿಸುವಷ್ಟು ನಮ್ಮ ಇಲಾಖೆಯಲ್ಲಿ ದುಡ್ಡಿಲ್ಲ; ನಾನು ವಿದೇಶಕ್ಕೆ ಹೋಗುತ್ತಿಲ್ಲ ಎಂದ ಸಚಿವ ಕೆ ವೆಂಕಟೇಶ್

ಬೆಂಗಳೂರು: ರಾಜ್ಯ ಕಾಂಗ್ರೆಸ್ ನಾಯಕತ್ವ ಬದಲಾವಣೆ ಮತ್ತು ಪವರ್ ಶೇರಿಂಗ್ ವಿಚಾರದ ಚರ್ಚೆ ಜೋರಾಗಿದೆ. ಅತ್ತ ಡಿಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ಹೋಗಿರೋದು ಸಾಕಷ್ಟು ಕುತೂಹಲ ಮೂಡಿಸಿದೆ.



ಈ ಮಧ್ಯೆ ಕಾಂಗ್ರೆಸ್‌ನಲ್ಲಿ ಶಾಸಕ ಫಾರಿನ್ ಟೂರ್ ಫೈಟ್ ಶುರುವಾಗಿದೆ. ಈ ಹಿಂದೆ ಪಶುಸಂಗೋಪನಾ ಇಲಾಖೆಯಿಂದ ಅಧ್ಯಯನ ಪ್ರವಾಸ ಆಯೋಜಿಸಲಾಗಿದೆ ಎಂಬ ಮಾತು ಕೇಳಿಬಂದಿತ್ತು. ಪಶುಸಂಗೋಪನ ಇಲಾಖೆ ಉನ್ನತೀಕರಣದ ಉದ್ದೇಶದಿಂದ ಫಾರಿನ್ ಟೂರ್ ಅಂತಾ ಹೇಳಲಾಗಿ–ತ್ತು. ಆದ್ರೀಗ ಪಶುಸಂಗೋಪನಾ ಇಲಾಖೆ ಸಚಿವರು ಈ ಬಗ್ಗೆ ಮಾತನಾಡಿದ್ದಾರೆ. ನಮ್ಮ ಇಲಾಖೆ ಹೆಸರು ಯಾಕೆ ಬಂತೋ ಗೊತ್ತಿಲ್ಲ, ನಮ್ಮ ಇಲಾಖೆ ಕಡೆಯಿಂದ ಯಾರನ್ನೂ ಕಳಿಸುತ್ತಿಲ್ಲ ಎಂದು ಸಚಿವ ಕೆ. ವೆಂಕಟೇಶ್ ಸ್ಪಷ್ಟನೆ ನೀಡಿದ್ದಾರೆ.

### ಸಚಿವ ಕೆ. ವೆಂಕಟೇಶ್ ಹೇಳಿದ್ದೇನು?:

ಕಾಂಗ್ರೆಸ್ ಪಾಳಯದಲ್ಲಿ ಫಾರಿನ್ ಟ್ರಿಪ್ ವಿಚಾರ ಭುಗಿಲೆದ್ದಿದೆ. ಫಾರಿನ್ ಟೂರ್ ವಿಚಾರವಾಗಿ ಗರಂ ಆಗಿರುವ ಹೈಕಮಾಂಡ್ ವರದಿ ಕೇಳಿದೆ.

ಈ ಬಗ್ಗೆ ಗೊಂದಲದ ವಾತಾವರಣ ನಿರ್ಮಾಣವಾಗಿದ್ದು, ಈ ಬಗ್ಗೆ ಪಶುಸಂಗೋಪನ ಇಲಾಖೆಯ ಸಚಿವ ಕೆ. ವೆಂಕಟೇಶ್ ಪ್ರತಿಕ್ರಿಯೆ ನೀಡಿದ್ದಾರೆ. ಫಾರಿನ್ ಟೂರ್ ವಿಚಾರದಲ್ಲಿ ನಮ್ಮ ಇಲಾಖೆ ಹೆಸರು ಯಾಕೆ ಬಂತೋ ಗೊತ್ತಿಲ್ಲ, ನಮ್ಮ ಇಲಾಖೆ ಕಡೆಯಿಂದ ಯಾರನ್ನೂ ಕಳಿಸುತ್ತಿಲ್ಲ, ಇಂಥ ಚರ್ಚೆ ಯಾಕೆ ಬಂತು ಅಂತಲೇ ಗೊತ್ತಾಗುತ್ತಿಲ್ಲ ಎಂದು ಹೇಳಿದರು.




## ಉಪ ಲೋಕಾಯುಕ್ತ-ರಿಗೇ ಆನ್‌ಲೈನ್ ದೋಖಾ! ರೇಜರ್ ಬ್ಲೇಡ್ ಆರ್ಡರ್

### ಮಾಡಿದ್ರೆ ಬಂದಿದ್ದು ಹಳೇ ಬಟ್ಟೆ ತುಂಡು

❑ ಸ್ನೇಹಜೀವಿ ನ್ಯೂಸ್

ಬೆಂಗಳೂರು, ಫೆಬ್ರವರಿ 13: ಕರ್ನಾಟಕದ ಉಪಲೋಕಾಯುಕ್ತ ಕೆಎನ್ ಫಣೀಂದ್ರ ಅವರೇ ಆನ್‌ಲೈನ್ ಶಾಪಿಂಗ್ ಮೋಸಕ್ಕೆ ಬಲಿಯಾಗುವಂತಾಗಿದೆ. ಅವರು ಗುಡ್ ಮ್ಯಾಕ್ಸ್ ಕಂಪನಿಯ ರೇಜರ್ ಬ್ಲೇಡ್‌ಗಳನ್ನು ಆನ್ ಲೈನ್ ಮೂಲಕ ಆರ್ಡರ್ ಮಾಡಿದ್ದರು. ಶ್ಯಾಡೋಫ್ಯಾಕ್ಸ್ ಮುಖಾಂತರ ಬಂದ ಪಾರ್ಸೆಲ್ ಅನ್ನು ತೆರೆದಾಗ, ಅದರಲ್ಲಿ ರೇಜರ್ ಬ್ಲೇಡ್‌ಗಳ ಬದಲು ಹಳೆಯ ಬಟ್ಟೆಗಳು ಪತ್ತೆಯಾಗಿವೆ! ಈ ಘಟನೆಯು ಆನ್‌ಲೈನ್ ಶಾಪಿಂಗ್ ಪ್ಲಾಟ್‌ಫಾರ್ಮ್‌ಗಳ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಉಪಲೋಕಾಯುಕ್ತರಂತಹ ಉನ್ನತ ಹುದ್ದೆಯಲ್ಲಿರುವವರೇ ಇಂತಹ ವಂಚನೆಗೆ ಗುರಿಯಾಗಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಸಂಬಂಧ, ಗುಡ್ ಮ್ಯಾಕ್ಸ್ ಕಂಪನಿ, ಡೆಲಿವರಿ ಸೇವೆ ಒದಗಿಸಿದ ಶ್ಯಾಡೋಫ್ಯಾಕ್ಸ್ ಕಂಪನಿ ಹಾಗೂ ಡೆಲಿವರಿ ಬಾಯ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಇಂತಹ ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಗ್ರಾಹಕರ ಆತಂಕಕ್ಕೆ ಕಾರಣವಾಗಿದೆ.

## ಕಾರ್ಮಿಕ ಕಲ್ಯಾಣ ಸಂಸ್ಥೆಯಿಂದ ವಿಜ್ಞಾನ ಮತ್ತು ನಾವಿನ್ಯತೆ ದಿನಾಚರಣೆ-ಪ್ರಶಸ್ತಿ ಪ್ರದಾನ

# ಕಾರ್ಮಿಕರು ಕಾಯಕದಿಂದ ಸಂತೃಪ್ತಿ ಕಾಣುವವರು : ನಾಗರಾಜ ಶೆಟ್ಟಿ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಕಾರ್ಮಿಕರು ತಮ್ಮ ಕಾಯಕದ ಮೂಲಕ ಸಂತೃಪ್ತಿ ಕಾಣುವ ಮೂಲಕ ಹೃದಯ ಶ್ರೀಮಂತಿಕೆಯುಳ್ಳ ವ್ಯಕ್ತಿತ್ವದವರು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಗದಗ ಜಿಲ್ಲಾಧ್ಯಕ್ಷ ನಾಗರಾಜ ಶೆಟ್ಟಿ ಬಣ್ಣಿಸಿದರು.

ಅವರು ಬುಧವಾರ ನಗರದ ಶ್ರೀಮತಿ ಉಷಾದೇವಿ ಕುಷ್ಟಗಿ ರೋಟರಿ ಕಮ್ಯುನಿಟಿ ಕೇರ್ ಸೆಂಟರ್‌ದಲ್ಲಿ ಗದುಗಿನ ಕಾರ್ಮಿಕ ಕಲ್ಯಾಣ ಸಂಸ್ಥೆ (ರಿ) ಥಾಮಸ್ ಅಲ್ವಾ ಎಡಿಸನ್ ಜನ್ಮದಿನವನ್ನು 'ವಿಜ್ಞಾನ ಮತ್ತು ನಾವಿನ್ಯತೆ ದಿನಾಚರಣೆ' ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಹಿರಿಯ ವೈರ್‌ಮನ್‌ರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಸತ್ಯ ಶುದ್ಧ ಕಾಯಕ ಮಾಡುವ ಮೂಲಕ ಸಂತೃಪ್ತ ಜೀವನ ನಡೆಸುವ ಕಾರ್ಮಿಕರು ಎಲ್ಲ ಋತುಮಾನಗಳಲ್ಲೂ ಪರಿಶ್ರಮಪಟ್ಟು ಹಗಲಿರುಳು ಪಾಳಿಯಲ್ಲಿ ಸೇವೆ ಒದಸುವ ಕಾರ್ಯದಲ್ಲಿ ತಮ್ಮನ್ನು ಸಮರ್ಪಿಸಿಕೊಂಡವರು ಎಂದರು.

ವಿದ್ಯುತ್ ಇತರೆ ತಾಂತ್ರಿಕ ಕೆಲಸ ಮಾಡುವ ವೈರ್‌ಮನ್‌ಗಳ ಸೇವೆ ಕೆಲವೊಮ್ಮೆ ಅಪಾಯವನ್ನೂ ಎದುರಿಸಬೇಕಾದಂತಹ ಸನ್ನಿವೇಶ ಬರುವ ಸಾಧ್ಯತೆಗಳು ಇರುವವು. ಜೀವದ ಹಂಗು ತೊರೆದು ಸೇವೆ ಒದಗಿಸುವರು. ಹಣ ಗಳಿಕೆಗಿಂತ ಸೇವೆ ಒದಗಿಸುವ ಮೂಲಕ ಜನರ ಪ್ರೀತಿ ವಿಶ್ವಾಸವನ್ನು ಪಡೆದವರಾಗಿದ್ದಾರೆ ಎಂದರು.

ಗದುಗಿನ ಅಂಜುಮನ್ ಎ ಇಸ್ಲಾಂ ಪಾಲಿಟೆಕ್ನಿಕ್ ಪ್ರೊ. ಶ್ರೀಮತಿ ಎಸ್.ಬಿ.ಅಫ್ಘಾನ್ ಅವರು ವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್



ಬಲ್ಬ ಸಂಶೋಧನೆ ಮಾಡುವ ಮೂಲಕ ಜಗತ್ತಿಗೆ ಬೆಳಕನ್ನು ನೀಡಿದಾತ. ಬಲ್ಬ ಬೆಳಕಿನ ಸುಧಾರಣೆ, ಪರಿವರ್ತನೆಯ ಮೂಲಕ ನಾವಿಂದು ವೈವಿಧ್ಯಮ ರೀತಿಯಲ್ಲಿ ಬೆಳಕನ್ನು ಪಡೆಯುವಂತಾಗಿದ್ದು ಈ ವಿಜ್ಞಾನ ಮತ್ತು ತಾಂತ್ರಿಕತೆಯಿಂದ ಎಂದರು.

ಎಲ್ಲ ಕ್ಷೇತ್ರದಲ್ಲೂ ವಿದ್ಯುತ್ ಅವಶ್ಯ ಮತ್ತು ಅನಿವಾರ್ಯ ಆಗಿದೆ ಈ ವಿದ್ಯುಚ್ಛಕ್ತಿಯಿಂದ ನಾವಿಂದು ಸಾಕಷ್ಟು ಪ್ರಗತಿಯನ್ನು ಕಾಣುವಂತಾಗಿದೆ. ಈ ವಿದ್ಯುತ್ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜಾಗ್ರತಿಯಿಂದ ಕೆಲಸ ಮಾಡುತ್ತಿರುವ ವೈರಮನ್‌ಗಳ ಮೇಲುಸ್ತುವಾರಿ ತಂತ್ರಜ್ಞರ ಕಾರ್ಯ ಶ್ಲ್ಯಾಘನೀಯ ಎಂದರು.

ಮುಖ್ಯ ಅತಿಥಿ ಗದಗ ಜಿಲ್ಲಾ ಕಟ್ಟಡ ನಿರ್ಮಾಣ ಕಾರ್ಮಿಕರ ಮಹಾಸಂಘದ ಅಧ್ಯಕ್ಷ ಮೆಹಬೂಬಖಾನ ಪಠಾಣ, ಧುರೀಣ-ರಾದ ಇರ್ಷಾದ್ ಮಾನ್ವಿ, ಮಹ್ಮದ್‌ಶಾಲಗಾರ, ಎಂ.ಜೆ.ಬಳ್ಳಾರಿ, ಖಲೀಲ್ ಬಳ್ಳಾರಿ ಅವರು ಕಾರ್ಮಿಕರ ಸಂಘಟನೆಯ ಬಲವರ್ಧನೆ ಹಾಗೂ ಕಾರ್ಮಿಕರ ಕಾಯಕ ನಿಷ್ಠೆ ಕುರಿತು ಮಾತನಾಡಿ ಗದಗ ಜಿಲ್ಲೆಯ ಕಾರ್ಮಿಕರ ಸಂಘಟನೆ ಕ್ರಿಯಾಶೀಲತೆಯಿಂದ ಕಾರ್ಯ ಮಾಡುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಮಿಕ ಕಲ್ಯಾಣ ಸಂಸ್ಥೆಯ ಅಧ್ಯಕ್ಷ ಮಹಮ್ಮದಇರ್ಫಾನ್ ಡಂಬಳ ಮಾತನಾಡಿ ಕಾರ್ಮಿಕರ ಕಲ್ಯಾಣ ಬಯಸುವುದೇ ಸಂಘದ ಉದ್ದೇಶವಾಗಿದ್ದು ಸರ್ಕಾರದ ಸೌಲಭ್ಯಗಳನ್ನು ಒದಗಿಸುವ ಹಾಗೂ ಕಾರ್ಮಿಕರಿಗೆ ಅನ್ಯಾಯವಾದರೆ ಅವರಿಗೆ ಸಂಘಟನೆ ಧ್ವನಿಯಾಗಲಿದೆ ಎಂದರು.

ಪ್ರಭಯ್ಯ ಹಿರೇಮಠ ಪ್ರಾರ್ಥಿಸಿದರು, ನಿಂಗಪ್ಪ ಕಟ್ಟಿಮನಿ ಸ್ವಾಗತಿಸಿದರು, ನಾಶೀರ್ ಚಿಕೇನಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ ನಿರೂಪಿಸಿದರು, ಖಾಜಾಸಾಬ ಗಬ್ಬೂರ ವಂದಿಸಿದರು.

ಸಮಾರಂಭದಲ್ಲಿ ಗಣ್ಯರಾದ ಝುಡ್.ಡಿ.ಬೇಲೇರಿ, ಮಹ್ಮದ್‌ಇಸೂಫ್ ಬೇಫಾರಿ, ಸಲೀಮ್ ಕಾತರಕಿ, ಬಾಪುಗೌಡ ಕರಿಸೋಮನಗೌಡರ, ಭೀಮಪ್ಪ ಪೂಜಾರ, ಮೈನು ಗುಜಮಾಗಡಿ, ಚಾಂದ್ ಅಬ್ಬಿಗೇರಿ, ರಾಮು ಬಾಗಲಕೋಟ ಸೇರಿದಂತೆ ಎಲ್ಲ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರಿದ್ದರು.

### ಪ್ರಶಸ್ತಿ ಪುರಸ್ಕೃತರು

ಕಾರ್ಮಿಕ ಕಲ್ಯಾಣ ಸಂಸ್ಥೆಯು ಹಿರಿಯ ವೈರ್‌ಮನ್‌ಗಳಾದ ಎಚ್.ಎಸ್.ಪಾಟೀಲ, ಅಪ್ಪಣ್ಣ ಹುಬ್ಬಳ್ಳಿ, ಸಿದ್ಧರಾಮಪ್ಪ ಹುಂಬಿ, ಸಲೀಂ ನಾಗರಕಟ್ಟಿ, ಪ್ರಭಯ್ಯ ಹಿರೇಮಠ, ಸುನೀಲ ಚಳಗೇರಿ, ಬಾಲಕೃಷ್ಣ ಕಲಾಲ ಅವರಿಗೆ 'ಕಾಯಕ ಪ್ರಭೆ' ಪ್ರಶಸ್ತಿಯೊಂದಿಗೆ ಫಲಪುಷ್ಪ ನೀಡಿ ಶಾಲು ಹೋದಿಸಿ ಸನ್ಮಾನಿಸಲಾಯಿತು. ಹಿರಿಯರಾದ ಎಚ್.ಎಸ್.ಪಾಟೀಲ ಸನ್ಮಾನಿತರ ಪರವಾಗಿ ಮಾತನಾಡಿದರು.

## ಸೆಂಟರ್ ಆಫ್ ಇಡಿಯನ್ ಗದಗ ಜಿಲ್ಲಾ ಸಮಿತಿಯಿಂದ

# ಕಾರ್ಮಿಕ ವರ್ಗದಿಂದ ಬೇಡಿಕೆಗೆ ಆಗ್ರಹಿಸಿ ಮುಷ್ಕರ




❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಹಮಾಲಿ ಕಾರ್ಮಿಕರು ಸೇರಿದಂತೆ ಕಾರ್ಮಿಕ ವರ್ಗದ ವಿವಿಧ ಬೇಡಿಕೆಗಳಿಗಾಗಿ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜಿಲ್ಲಾ ಸಮಿತಿ ಗದಗ ವತಿಯಿಂದ ಒಂದು ದಿನದ ಮುಷ್ಕರ ನಡೆಸಿ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಧಾನಮಂತ್ರಿ, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ಗದಗ ಸಿಐಟಿಯು ಅಧ್ಯಕ್ಷರಾದ ಮಹೇಶ ಹಿರೇಮಠರವರು ಮಾತನಾಡಿ ಅಸಂಘಟಿತ ವಲಯದ ಶ್ರಮಜೀವಿಗಳಾದ ಹಮಾಲಿ ಕಾರ್ಮಿಕರು ಸೇರಿದಂತೆ ಕಾರ್ಮಿಕ ವರ್ಗದ ಬೇಡಿಕೆಗಳಾದ ಕಾರ್ಮಿಕರ ರಕ್ಷಣಾತ್ಮಕ ಅಂಶಗಳು, ಮೂಲಭೂತ ಹಕ್ಕುಗಳು, ವೇತನ ಕುರಿತು ವ್ಯಾಖ್ಯಾನ, ಸಾಮಾಜಿಕ ಭದ್ರತೆ ಮಾಲೀಕ-ಕಾರ್ಮಿಕ ಸಂಬಂಧ, ವೇತನ ಚೌಕಸಿ, ಆರೋಗ್ಯ ಮತ್ತು ಸುರಕ್ಷತೆ ನಿಯಮಗಳು ಹಾಗೂ ಕಲ್ಯಾಣ ಯೋಜನೆಗಳ ಕಲ್ಪನೆಗಳನ್ನು ದುರ್ಬಲಗೊಳಿಸುವ ಕಾರ್ಪೋರೇಟ್ ಬಂಡವಾಳಗಳ ಪರ ರೂಪಿಸಿರುವ ಹಾಗೂ ದೇಶದ ಕಾರ್ಮಿಕರನ್ನು ನವ ಗುಲಾಮಗಿರಿಗೆ ತಳ್ಳಲಿರುವ ಕೇಂದ್ರ ಸರಕಾರ ಜಾರಿ ಮಾಡಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು ಕಾರ್ಮಿಕ ವಿರೋಧಿ ನೀತಿಯನ್ನು ವಾಪಸ್ಸು ಪಡೆಯಬೇಕು. ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆಯನ್ನು ಮರುಸ್ಥಾಪಿಸಬೇಕು. ಎಲ್ಲಾ ಹಮಾಲಿ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಅಸಂಘಟಿ-ತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಭವಿಷ್ಯನಿಧಿ ಪಿಂಚಣಿ, ಸಹಜ ಮರಣ ಪರಿಹಾರ, ಶಿಕ್ಷಣ ಸಹಾಯ ಮುಂತಾದ ಸಮಗ್ರ ಕಲ್ಯಾಣ ಸೌಲಭ್ಯಗಳನ್ನು ಜಾರಿ ಮಾಡಬೇಕು. ಇದಕ್ಕಾಗಿ ಪ್ರಸ್ತುತ ಬಜೆಟ್‌ನಲ್ಲಿ ರೂ. 1000 ಕೋಟಿ ಮೀಸಲಿಡಬೇಕು.

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಮಾದ-ರಿಯಲ್ಲಿ ಉದ್ಯೋಗ ಭದ್ರತೆ ಹಾಗೂ ಸಾಮಾಜಿಕ ಭದ್ರತೆ ಕಲ್ಪಿಸಲು ರಾಜ್ಯದ ಹಮಾಲಿ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ರೂಪಿಸಬೇಕು. ಎಪಿಎಂಸಿ "ಕಾಯಕ ನಿಧಿ" ಯಿಂದ ನಿವೃತ್ತಿ ಪರಿಹಾರ (ಇಡಿಗಂಟು) ರೂ. 1,00,000, ಸಮವಸ್ತ್ರ ನೀಡಬೇಕು. ಮಹಿಳಾ ಹಮಾಲಿ ಕಾರ್ಮಿಕ-ರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ ಶೌಚಾಲಯ ನಿರ್ಮಾಣ ಮತ್ತು ಕನಿಷ್ಠಿ ವೇತನ ಜಾರಿ ಮಾಡಬೇಕು. ಸರ್ಕಾರಿ ಹಾಗೂ ಖಾಸಗಿ ಮಿಲ್, ಗೋಡೌನ್-ವೇರಹೌಸ್‌ಗಳಲ್ಲಿ ಕೆಲಸ ನಿರ್ವಹಿಸುವ ಹಮಾಲಿ ಕಾರ್ಮಿಕರಿಗೆ ಗುರುತಿನ ಚೀಟಿ, ಭವಿಷ್ಯನಿಧಿ, ಎಎಸ್‌ಐ, ಬೋನಸ್ ಸೇರಿದಂತೆ ಕಾನೂನಾತ್ಮಕ ಸೌಲಭ್ಯಗಳನ್ನು ಕಡ್ಡಾಯವಾಗಿ ಜಾರಿ ಮಾಡಬೇಕು. ಗ್ರಾಮೀಣ ನಗರ ಬಜಾರ ಹಮಾಲಿ ಕಾರ್ಮಿಕರಿಗೆ ಉದ್ಯೋಗ ಭದ್ರತೆ, ವಸತಿ, ಸಾಮಾಜಿಕ ಭದ್ರತೆ ಒದಗಿಸಬೇಕು. ಲೋಡಿಂಗ್ ಅನ್ ಲೋಡಿಂಗ್ ಉದ್ದಿಮೆಗೆ ಜಾರಿಯಾಗಿರುವ ಕನಿಷ್ಠ ವೇತನ ಜಾರಿ ಮಾಡಲು ಕಾರ್ಮಿಕ ಇಲಾಖೆ ಕ್ರಮವಹಿಸಬೇಕು. ಕನಿಷ್ಠ ವೇತನ ವೈಜ್ಞಾನಿಕವಾಗಿ ಮರು ಪರಿಷ್ಕರಣೆಯಾಗಬೇಕು. ಹಮಾಲಿ ಕಾರ್ಮಿಕರಿಗೆ ಕೇಂದ್ರ- ರಾಜ್ಯ ಸರಕಾರಗಳ ವಿವಿಧ ವಸತಿ ಯೋಜನೆಗಳನ್ನು ಬಳಸಿಕೊಂಡು ಸೂಕ್ತವಾದ ಗುಂಪು ವಸತಿ ಯೋಜನೆಗಳನ್ನು ನಿರ್ಮಿಸಬೇಕೆಂದು ಎಂದು ಹೇಳಿದರು.

ಈ ಸಂದರ್ಬದಲ್ಲಿ ಮಾರುತಿ ಚಿಟಗಿ, ಯಶೋಧಾ ಬೆಟಗೇರಿ, ಬಸವರಾಜ ಮಂತೂರ, ರುದ್ರಪ್ಪ ಕಂದಗಲ್ಲ, ಸಾವಿತ್ರಿ ಸಬ್ನಿಸ್, ಶಾರದಾ ರೋಣದ, ಪೀರು ರಾಠೋಡ, ಮುತ್ತಪ್ಪ ಚಲವಾದಿ, ಮೈಬೂ ಹವಾಲ್ದಾರ, ನಿಂಗಪ್ಪ ಸರಸೂರ, ಬಸವರಾಜ, ಸಂತೋಷ ಕುಂಬಾರ, ಹಾಲಪ್ಪ ಬಂಡಿವಡ್ಡರ, ತಾಂಬ್ರಗುಂಡಿ, ರುದ್ರಗೌಡ ಸಂಕನಗೌಡ್ರ ಸೇರಿದಂತೆ ಹಮಾಲಿ ಕಾರ್ಮಿಕರು, ವಿವಿಧ ಅಸಂಘಟಿತ ಕಾರ್ಮಿಕರು ಮುಷ್ಕರದಲ್ಲಿದ್ದರು.

# ನಾಳೆ ವಿವೇಕಾನಂದ ನಗರದಲ್ಲಿ ಜೀವನ ದರ್ಶನ-ಮಹಾಶಿವರಾತ್ರಿ



❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಗದುಗಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ (ರಿ) ಯು 'ಜೀವನ ದರ್ಶನ' ಮಾಲಿಕೆ 56ನೇ ಮಾಸಿಕ ಕಾರ್ಯಕ್ರಮ ಹಾಗೂ ಮಹಾ ಶಿವರಾತ್ರಿ ಮಹೋತ್ಸವದ ಕಾರ್ಯಕ್ರಮವನ್ನು ಫೆ. 14 ರಂದು ಶನಿವಾರ ಸಂಜೆ 6-30 ಗಂಟೆಗೆ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಿದೆ.

ಸಾನಿಧ್ಯವನ್ನು ಲಕ್ಕುಂಡಿಯ ಅಲ್ಲಮಪ್ರಭು ದೇವರಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸುವರು. ಅಧ್ಯಕ್ಷತೆಯನ್ನು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ವಹಿಸುವರು. ಸಮಿತಿಯ ಗೌರವಾಧ್ಯಕ್ಷ ಜಿ.ಜಿ.ಕುಲಕರ್ಣಿ, ಉಪಾಧ್ಯಕ್ಷ ಆರ್.ಆರ್.ಕಾಶಪ್ಪನವರ ಉಪಸ್ಥಿತ-ರಿರುವರು.

ಇದೇ ಸಂದರ್ಭದಲ್ಲಿ ಮಕ್ಕಳಿಂದ ಹಾಗೂ ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಫೆ. 17 ರಂದು ಸಂಜೆ 6-30 ಗಂಟೆಗೆ ಕಾಶೀ ವಿಶ್ವನಾಥನ ಪಾಲಕಿಸೇವೆ ಜರುಗಲಿದೆ. ಸರ್ವ ಭಕ್ತಾಧಿಗಳು ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕಾರ್ಯದರ್ಶಿ ಕೆ.ಪಿ.ಗುಳಗೌಡರ ವಿನಂತಿಸಿದ್ದಾರೆ.

# ಬೆಳೆ ದರ್ಶಕ ಆ್ಯಪ್‌ನಲ್ಲಿ ಆಕ್ಷೇಪಣೆ ಸಲ್ಲಿಕೆ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಜಿಲ್ಲೆಯ ರೈತರು ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಬೆಳೆಗಳು ತಪ್ಪಾಗಿ ನಮೂದಾಗಿದ್ದಲ್ಲಿ ಫೆಬ್ರುವರಿ 15 ರೊಳಗಾಗಿ ಬೆಳೆ ದರ್ಶಕ ಆ್ಯಪ್ ನಲ್ಲಿ ಆಕ್ಷೇಪಣೆಯನ್ನು ಸಲ್ಲಿಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಗೆ ತಳಿಸಿದ್ದಾರೆ.

# ಭಾರತದೆಲ್ಲೆಡೆ ಹಣಕಾಸು ಸಾಕ್ಷರತಾ ವಾರ ಕಾರ್ಯಕ್ರಮ




❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 :ಭಾರತೀಯ ರಿಸರ್ವ್ ಬ್ಯಾಂಕ್ ವತಿಯಿಂದ ದೇಶವ್ಯಾಪಿಯಾಗಿ ಫೆಬ್ರವರಿ 9 ರಿಂದ ಫೆಬ್ರವರಿ 13 ರವರೆಗೆ ಹಣಕಾಸು ಸಾಕ್ಷರತಾ ವಾರ (ಈಐಫ) ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಗದಗ ಜಿಲ್ಲೆಯ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಲೀಡ್ ಬ್ಯಾಂಕ್ ಡಿಸ್ಟ್ರಿಕ್ಟ್ ಮ್ಯಾನೇಜರ್ ಸಂತೋಷ್ ಎಂ.ವಿ ಹಾಗೂ ವಿವಿಧ ಬ್ಯಾಂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಾಗೃತಿ ಪೋಸ್ಟರ್ಗಳನ್ನು ಬಿಡುಗಡೆ ಮಾಡಲಾಯಿತು.

ಹಣಕಾಸು ಸಾಕ್ಷರತಾ ವಾರದ ಅವಧಿಯಲ್ಲಿ ಭಾಗವಹಿಸುವವರಿಗೆ ಏಜಲ, ಅಏಜಲ, ಮನಿ ಮ್ಯೂಲ್ ಖಾತೆಗಳು, ಸೈಬರ್ ಮೋಸಗಳು ಹಾಗೂ ಸುರಕ್ಷಿತ ಬ್ಯಾಂಕಿಂಗ್ ಕ್ರಮಗಳ ಕುರಿತು ಮಾರ್ಗದರ್ಶನ ನೀಡಲಾಗುತ್ತದೆ.

# ಜ.ತೋಂಟದಾರ್ಯ ಜಾತ್ರಾ ಸಮಿತಿ ಅಧ್ಯಕ್ಷರಾಗಿ ವಿನಾಯಕ ಮಾನ್ವಿ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ-ಕೇಂದ್ರದಲ್ಲಿ ಗುರುವಾರ ಶ್ರೀ ಜಗದ್ಗುರು ತೋಂಟದಾರ್ಯ ಮಠದ 2025ನೇ ಸಾಲಿನ ಜಾತ್ರಾ ಮಹೋತ್ಸವದ ಮಹಾಪ್ರಸಾದ ವಿತರಣೆ ಮತ್ತು 2026ನೇ ಸಾಲಿನ ಜಾತ್ರಾಮಹೋತ್ಸವದ ಪೂರ್ವಭಾವಿ ಸಭೆ ಜರುಗಿತು.

2026ನೇ ಸಾಲಿನ ಜಾತ್ರಾ ಸಮಿತಿಯ ಪದಾಧಿಕಾ-ರಿಗಳ ಆಯ್ಕೆ ನಡೆಯಿತು. ಮಾಜಿ ಸಚಿವರಾದ ಎಸ್.ಎಸ್ ಪಾಟೀಲ, ಎಂ.ಸಿ ಐಲಿ, ಬಾಲಚಂದ್ರ ಭರಮಗೌಡರ, ಎಸ್. ಎಸ್.ಪಟ್ಟಣಶೆಟ್ಟಿ, ಗಂಗಾಧರ ಹಿರೇಮಠ, ಶೇಖಣ್ಣ ಕವಳಿಕಾಯಿ, ವಿರುಪಣ್ಣ ಬಳ್ಳೊಳ್ಳಿ, ಕೆ.ಎಚ್. ಬೇಲೂರು, ಕೆ.ಎಸ್. ಚೆಟ್ಟಿ, ಎಮ್.ಎಸ್.ಅಂಗಡಿ ಮುಂತಾದವರನ್ನೊಳಗೊಂಡ ಹಿರಿಯ ಭಕ್ತರ ಸಮಿತಿಯು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಆ ಪ್ರಕಾರ ಈ ವರ್ಷದ ಜಾತ್ರಾ ಸಮಿತಿಯ ಅಧ್ಯಕ್ಷರನ್ನಾಗಿ ವಿನಾಯಕ ಮಾನ್ವಿ, ಉಪಾಧ್ಯಕ್ಷರನ್ನಾಗಿ ಶಿವಯ್ಯ ನಾಲ್ವತ್‌ವಾಡಮಠ, ಸುಭಾಷ ಚನ್ನಪ್ಪನವರ, ಶ್ರೀಮತಿ ಸುಧಾ ಹುಚ್ಚಣ್ಣವರ ಕೋಶಾಧ್ಯಕ್ಷರಾಗಿ ವಿರುಪಾಕ್ಷಪ್ಪ ದಲಾಲಿ, ಸಹ ಕೋಶಾಧ್ಯಕ್ಷರಾಗಿ ಈರಣ್ಣ ಗಡಗಿ, ಕಾರ್ಯದರ್ಶಿಗಳಾಗಿ ಚೇತನ ಅಂಗಡಿ, ಸಹ ಕಾರ್ಯದರ್ಶಿಗಳಾಗಿ ಎಮ್. ಎಚ್. ಹೂಗಾರ, ಚಂದ್ರಶೇಖರ ಜಿ. ರಾಜೂರ, ಎಸ್. ಎಂ. ಪವಾಡಿಗೌಡ್ರ, ಸಂಘಟನಾ ಕಾರ್ಯದರ್ಶಿಯಾಗಿ



ಉಮೇಶಗೌಡ ಪಾಟೀಲ, ಯಲ್ಲೂಸಾ ಮೋತಿಲಾಲಸಾ ಹಬೀಬ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ವಿನಾಯಕ ಮಾನ್ವಿ ಮಾತನಾಡಿ ಜಾತ್ರೆಯನ್ನು ಎಲ್ಲ ಭಕ್ತರ ಸಹಕಾರದೊಂದಿಗೆ ಯಶಸ್ವಿಗೊಳಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದ ಸಾನಿಧ್ಯವಹಿಸಿದ್ದ ಡಾ. ತೋಂಟದ ಸಿದ್ಧರಾಮ ಶ್ರೀಗಳು ಆಶೀರ್ವಚನ ನೀಡಿ ಮಾತನಾಡುತ್ತಾ, 2025 ನೇ ಸಾಲಿನ ಜಾತ್ರಾ ಮಹೋತ್ಸವದ ಸರ್ವಪದಾಧಿಕಾರಿಗಳು ಅತ್ಯಂತ ಕ್ರೀಯಾಶೀಲರಾಗಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ. ಅದೇ ರೀತಿ 2026 ನೇ ಸಾಲಿನ ಜಾತ್ರಾ ಮಹೋತ್ಸವವನ್ನು ಸರ್ವ ಸದ್ಭಕ್ತರ ಹಾಗೂ ಪದಾಧಿಕಾರಿಗಳ ಸಹಕಾರದಿಂದ ವೈಶಿಷ್ಟ್ಯಪೂರ್ಣವಾಗಿ ಆಚರಿಸಬೇಕು. ಜಾತ್ರೆಗಳು ಕೇವಲ ಸಾಂಪ್ರದಾಯಿಕ ಹಿನ್ನೆಲೆಯನ್ನು ಹೊಂದಿರದೆ, ಜನಸಾಮಾನ್ಯರ ಜ್ಞಾನದೀವಿಗೆಯನ್ನು ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ಪುಸ್ತಕಗಳ ಬಿಡುಗಡೆ, ಕೃಷಿ ಚಟುವಟಿಕೆ, ನಾಡಿನ ಸಾಹಿತಿಗಳಿಂದ ಭಾಷಣ ಹೀಗೆ ಅನೇಕ ಮೌಲಿಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಲಿಂ.ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ಹಾಕಿದ ಬಸವಪಥ-'ದಲ್ಲಿಯೇ ಈ ಜಾತ್ರೆಯು ಸಾಗಲಿದ್ದು, ಸಕಲ ಸದ್ಭಕ್ತರು ಜಾತ್ರಾ ಪದಾಧಿಕಾರಿಗಳೊಂದಿಗೆ ಜಾತ್ರೆಯನ್ನು ಅರ್ಥ-'ಪೂರ್ಣವಾಗಿ ಆಚರಿಸಬೇಕೆಂದು ಕರೆ ನೀಡಿದರು.

ಕಳೆದ 2025ನೇ ಸಾಲಿನ ಜಾತ್ರಾ ಸಮಿತಿಯ ಅಧ್ಯಕ್ಷರಾದ ಡಾ.ಧನೇಶ ದೇಸಾಯಿ ಅವರು ಸರ್ವರನ್ನೂ ಸ್ವಾಗತಿಸಿದರು. ಎಂ.ಸಿ.ಐಲಿ ಅವರು ನಿರೂಪಣೆ ಮಾಡಿದರು. ಪ್ರಕಾಶ ಅಸುಂಡಿ, ಜೆ.ಕೆ.ಜಮಾದಾರ ಪ್ರಾಸ್ತಾವಿಕವಾಗಿ ಜಾತ್ರೆ ನಡೆದು ಬಂದ ಇತಿಹಾಸವನ್ನು ಸಭೆಗೆ ವಿವರಿಸಿದರು.

## ಅರುಣೋದಯ ಶಾಲೆಯ ವಾರ್ಷಿಕೋತ್ಸವ ನಾಳೆ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಗದುಗಿನ ಬ್ಯಾಂಕರ್ಸ ಕಾಲೋನಿಯ ಪಂಚಮುಖಿ ಮಾರುತಿ ದೇವಸ್ಥಾನದ ಬಳಿ ಇರುವ ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯ ವಾರ್ಷಿಕೋತ್ಸವವು ಫೆ. 14 ರಂದು ಶನಿವಾರ ಮುಂಜಾನೆ 11 ಗಂಟೆಗೆ ಜರುಗಲಿದೆ.

ಅಧ್ಯಕ್ಷತೆಯನ್ನು ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯ ಉಪಾಧ್ಯಕ್ಷ ಲುಕ್ಕಣಸಾ ರಾಜೋಳಿ ವಹಿಸುವರು. ಅತಿಥಿಗಳಾಗಿ ಗದುಗಿನ ಜನ ಚೇತನ ಶಿಕ್ಷಣ ಸಮಿತಿಯ ವ್ಯವಸ್ಥಾಪಕ ನಿರ್ದೇಶಕ ಡಾ.ವೇದಾ ವಿಕ್ರಮ ಬಿದರೂರ, ಧನಲಕ್ಷ್ಮೀ ಯೂನಿಫಾರ್ಮ್ಸ್‌ನ ಶ್ರೀ ಕಂಚನದೇವಿ ಓಸ್ವಾಲ ಆಗಮಿಸುವರು. ಹುಬ್ಬಳ್ಳಿಯ ಸೇವಾ ಭಾರತಿ ಟ್ರಸ್ಟ್‌ನ ವಿಶ್ವಸ್ಥರಾದ ಶ್ರೀಕೃಷ್ಣ ಕುಲಕರ್ಣಿ ಉಪಸ್ಥಿತರಿರುವರು.

ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಜಯರಾಜ ಮುಳಗುಂದ, ಕೋಶಾಧ್ಯಕ್ಷ ಜಿತೇಂದ್ರ ಶಹಾ, ಸದಸ್ಯರಾದ ಬಸವರಾಜ ನಾಗಲಾಪೂರ, ಉಮಾಕಾಂತಸಾ ಮೇರವಾಡೆ, ಲಲಿತ್ ಜೈನ್, ಪ್ರಕಾಶ ವೈಲಾಯ, ಡಾ.ಉಮೇಶ ಹಾದಿ, ಬಸವರಾಜ ಪಟ್ಟಣಶೆಟ್ಟಿ, ಜಯಪ್ರಕಾಶ ಭಜಂತ್ರಿ, ಸುಧೀರಸಿಂಹ ಘೋರ್ಪಡೆ ಉಪಸ್ಥಿತರಿರುವರು ಎಂದು ಶಾಲಾ ಸಮಿತಿ ತಿಳಿಸಿದೆ.

ವಿಶೇಷ ಲೇಖನ

# ಶಕ್ತಿ ಯೋಜನೆ: ಮಹಿಳೆಯರ ಚಲನವಲನಕ್ಕೆ ಹೊಸ ಶಕ್ತಿ

❑ ಸ್ನೇಹಜೀವಿ ದಿನಪತ್ರಿಕೆ

ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ರಾಜ್ಯದ ಮಹಿಳೆಯರ ಬದುಕಿನಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ತರಲು ಕಾರಣವಾಗಿದೆ. ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ ಈ ಯೋಜನೆ, ಕೇವಲ ಸಾರಿಗೆ ಸೌಲಭ್ಯವಷ್ಟೇ ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಶಕ್ತಿ ಯೋಜನೆ ಜಾರಿಯಾದ ನಂತರ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಹಿಳೆಯರ ಸಂಚಾರ ಸ್ವಾತಂತ್ರ್ಯ ಹೆಚ್ಚಾಗಿದೆ. ಉದ್ಯೋಗ, ಶಿಕ್ಷಣ, ಆರೋಗ್ಯ ಸೇವೆಗಳು ಹಾಗೂ ಸ್ವ-ಉದ್ಯಮಗಳಿಗಾಗಿ ಮಹಿಳೆಯರು ಈಗ ಹೆಚ್ಚು ಆತ್ಮವಿಶ್ವಾಸದಿಂದ ಪ್ರಯಾಣಿಸುತ್ತಿದ್ದಾರೆ. ಹಿಂದೆ ಪ್ರಯಾಣ ವೆಚ್ಚದ ಕಾರಣದಿಂದ ನಿರ್ಬಂಧಿತವಾಗಿದ್ದ ಅನೇಕ ಅವಕಾಶಗಳು ಈಗ ಮಹಿಳೆಯರಿಗೆ ಸುಲಭವಾಗಿ ಲಭ್ಯವಾಗುತ್ತಿವೆ.

ಈ ಯೋಜನೆಯ ದೊಡ್ಡ ಪರಿಣಾಮ ಕುಟುಂಬದ ಆರ್ಥಿಕ ಸ್ಥಿತಿಯ ಮೇಲೆ ಕಂಡುಬಂದಿದೆ. ದಿನನಿತ್ಯದ ಪ್ರಯಾಣ ವೆಚ್ಚ ಉಳಿದಿರುವುದರಿಂದ ಕುಟುಂಬಗಳ ಉಳಿತಾಯ ಹೆಚ್ಚಾಗಿದೆ. ವಿಶೇಷವಾಗಿ ಕಾರ್ಮಿಕ ವರ್ಗದ ಮಹಿಳೆಯರಿಗೆ ಇದು ಮಹತ್ತರ ನೆರವಾಗಿದೆ. ಕೆಲಸದ ಸ್ಥಳಗಳಿಗೆ ನಿರಂತರವಾಗಿ ಹೋಗಲು ಸಾಧ್ಯವಾಗುತ್ತಿರುವುದರಿಂದ ಅವರ ಆದಾಯ ಸ್ಥಿರವಾಗಿದೆ.

ಶಕ್ತಿ ಯೋಜನೆ ಮಹಿಳಾ ಶಿಕ್ಷಣಕ್ಕೂ ಉತ್ತೇಜನ ನೀಡಿದೆ. ಕಾಲೇಜು ಮತ್ತು ತರಬೇತಿ ಕೇಂದ್ರಗಳಿಗೆ



ಹೋಗುವ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. ದೂರದ ಊರುಗಳಿಂದ ನಗರಗಳಿಗೆ ಶಿಕ್ಷಣಕ್ಕಾಗಿ ಪ್ರಯಾಣಿಸುವ ವಿದ್ಯಾರ್ಥಿನಿಯರಿಗೆ ಈ ಯೋಜನೆ ಆಶಾಕಿರಣವಾಗಿದೆ.

ಸಾಮಾಜಿಕವಾಗಿ ನೋಡಿದರೆ, ಈ ಯೋಜನೆ ಮಹಿಳೆಯರ ಭಾಗವಹಿಸುವಿಕೆಯನ್ನು ಸಾರ್ವಜನಿಕ ಬದುಕಿನಲ್ಲಿ ಹೆಚ್ಚಿಸಿದೆ. ಸ್ವಸಹಾಯ ಸಂಘಗಳು, ಮಾರುಕಟ್ಟೆ ಚಟುವಟಿಕೆಗಳು, ಸರ್ಕಾರಿ ಕಚೇರಿಗಳ ಸಂಪರ್ಕ ಎಲ್ಲವೂ ಸುಲಭವಾಗಿದೆ. ಮಹಿಳೆಯರ ಚಲನವಲನ ಹೆಚ್ಚಿದಂತೆ ಅವರ ಧ್ವನಿ ಮತ್ತು ಹಕ್ಕುಗಳ ಅರಿವು ಕೂಡ ವಿಸ್ತರಿಸಿದೆ.

ಸಾರಿಗೆ ಇಲಾಖೆಯ ದೃಷ್ಟಿಯಿಂದಲೂ ಶಕ್ತಿ ಯೋಜನೆ ಒಂದು ದೊಡ್ಡ ಕಾರ್ಯಾಚರಣೆ. ಹೆಚ್ಚಿದ ಪ್ರಯಾಣಿಕರ ಸಂಖ್ಯೆಯನ್ನು ನಿರ್ವಹಿಸಲು ಬಸ್‌ಗಳ ಸಂಖ್ಯೆ, ವೇಳಾಪಟ್ಟಿ ಹಾಗೂ ಸೇವಾ ಗುಣಮಟ್ಟವನ್ನು ಸುಧಾರಿಸುವ ಅಗತ್ಯ ಮೂಡಿದೆ. ಇದು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸಮಗ್ರ ಅಭಿವೃದ್ಧಿಗೆ ಕಾರಣವಾಗಿದೆ.

ಒಟ್ಟಿನಲ್ಲಿ, ಶಕ್ತಿ ಯೋಜನೆ ಕೇವಲ ಉಚಿತ ಪ್ರಯಾಣ ಸೌಲಭ್ಯವಲ್ಲ; ಅದು ಮಹಿಳೆಯರ ಜೀವನಮಟ್ಟವನ್ನು ಸುಧಾರಿಸುವ ಸಾಮಾಜಿಕ ಚಳುವಳಿಯಂತಾಗಿದೆ. ಆರ್ಥಿಕ ಉಳಿತಾಯ, ಶಿಕ್ಷಣದ ಅವಕಾಶ, ಉದ್ಯೋಗದ ಪ್ರವೇಶ ಹಾಗೂ ಸ್ವಾವಲಂಬನೆಯ ದಿಕ್ಕಿನಲ್ಲಿ ಈ ಯೋಜನೆ ನಿಜವಾದ ಶಕ್ತಿ ಯಾಗಿ ಪರಿಣಮಿಸಿದೆ. ಮಹಿಳೆಯರ ಸಬಲೀಕರಣವೇ ರಾಜ್ಯದ ಪ್ರಗತಿಯ ಆಧಾರ ಎಂಬುದನ್ನು ಈ ಯೋಜನೆ ಸ್ಪಷ್ಟವಾಗಿ ತೋರಿಸಿದೆ.

**ಮಹಿಳೆಯರ ಸಂಚಾರ ಸ್ವಾತಂತ್ರ್ಯಕ್ಕೆ ಬಲ :**

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಮಹಿಳೆಯರ ದೈನಂದಿನ ಬದುಕಿನಲ್ಲಿ ಮಹತ್ವದ ಬದಲಾವಣೆ ತಂದಿದೆ. ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸುವ ಮೂಲಕ ಅವರ ಸಂಚಾರ ಸ್ವಾತಂತ್ರ್ಯವನ್ನು ವಿಸ್ತರಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಒಟ್ಟಿನಲ್ಲಿ ಶಕ್ತಿ ಯೋಜನೆ ಮಹಿಳೆಯರ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದ್ದು, ಅವರ ಆತ್ಮವಿಶ್ವಾಸ ಹಾಗೂ ಸಾಮಾಜಿಕ ಭಾಗವಹಿಸುವಿಕೆಯನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿ ಸಾಧನವಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿಗೆ ಮಹಿಳೆಯರ ಸಕ್ರಿಯ ಪಾತ್ರ ಅಗತ್ಯವೆಂಬುದನ್ನು ಈ ಯೋಜನೆ ಮತ್ತೊಮ್ಮೆ ಸಾಬೀತುಪಡಿಸಿದೆ.

**ಶಕ್ತಿ ಯೋಜನೆ ಮುಖ್ಯಮಂತ್ರಿ ಸಿದ್ಧರಾಮಯ್ಯನ ನೇತೃತ್ವದಲ್ಲಿ 11 ಜೂನ್ 2023 ರಿಂದ ಜಾರಿಗೆ ಬಂದಿದೆ. ಮಹಿಳೆಯರಿಗೆ ಉಚಿತ ಸಾರ್ವಜನಿಕ ಬಸ್ ಪ್ರಯಾಣದ ಮೂಲಕ ಯಶಸ್ವಿಯಾಗಿ 500 ಕೋಟಿಗೂ ಅಧಿಕ ಉಚಿತ ಪ್ರಯಾಣಗಳು ಹಾಗೂ 12,500 ಕೋಟಿ ಕ್ಕೆ ಹೆಚ್ಚು ಟಿಕೆಟ್ ಮೌಲ್ಯಗಳನ್ನು ರಾಜ್ಯದ ಮಹಿಳೆಯರು ಪಡೆದಿದ್ದಾರೆ. ದೈನಂದಿನ ಪ್ರಯಾಣದ ಸಂಖ್ಯೆಯಲ್ಲಿ ಸಹ ಪರಿಣಾಮಕಾರಿ ಏರಿಕೆ ಕಂಡುಬಂದಿದೆ ಮತ್ತು ಸಮಗ್ರವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಮಹಿಳೆಯರಿಗೆ ಪ್ರಯಾಣದ ನಿರ್ಬಂಧ ಇಲ್ಲದೇ ಅವಕಾಶ ಸುಲಭವಾಗಿದೆ.**

**ಜಿಲ್ಲೆಯಲ್ಲಿ ಶಕ್ತಿ ಯೋಜನೆಯ ಪ್ರಗತಿ : ಶಕ್ತಿ ಯೋಜನೆ ಆರಂಭದ ದಿನಾಂಕ 11-6-2023 ರಿಂದ 31-1-2026 ರವರೆಗೆ ಗದಗ ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ 25.54 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದು 863.57 ಕೋಟಿ ರೂ.ಗಳ ಶೂನ್ಯ ಟಿಕೇಟ್ ವಿತರಿಸಿದೆ. ಆ ಪೈಕಿ ತಾಲೂಕಾವಾರು ಶೂನ್ಯ ಟಿಕೇಟ್ ನೀಡಿದ ಮೊತ್ತದ ವಿವರ ಇಂತಿದೆ (ಕೋಟಿ ರೂ.ಗಳಲ್ಲಿ) : ಗದಗ-128.46, ರೋಣ -58.81, ಲಕ್ಷ್ಮೇಶ್ವರ- 67.75, ನರಗುಂದ- 60.78, ಮುಂಡರಗಿ- 51.67, ಗಜೇಂದ್ರಗಡ-20.86, ಶಿರಹಟ್ಟಿ- 475.20.**

ಹನುಮಂತ ಬೆಂತೂರ
ಅಪ್ರೆಂಟಿಸ್,
ವಾರ್ತಾ ಮತ್ತು ಸಾ.ಸಂ.ಇಲಾಖೆ,
ಗದಗ

# ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ವಿಚಾರ ಸಂಕಿರಣ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಕೇಂದ್ರ ಮುಂಗಡ ಪತ್ರ 2026-2027ರಲ್ಲಿ ಆದಾಯ ತೆರಿಗೆ ಹಾಗೂ ಸರಕು ಹಾಗೂ ಸೇವಾ ತೆರಿಗೆಯಲ್ಲಿ ಆದ ಬದಲಾವಣೆಗಳ ಬಗ್ಗೆ ಮಾತನಾಡಿದರು. ಆದಾಯಕರ ತೆರಿಗೆಯ ದರಗಳಲ್ಲಿ ಯಾವುದೇ ರೀತಿ ಬದಲಾವಣೆ ಆಗಿರುವುದಿಲ್ಲ ಎಂದು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಗದಗ ಚಾಪ್ಟರ್ ಆಫ್ ಚಾರ್ಟರ್ಡ ಅಕೌಂಟಂಟ್ಸ್, ಗದಗ ಹಾಗೂ ಗದಗ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ, ಗದಗ ಇವರುಗಳ ಸಂಯುಕ್ತ ಅಶ್ರಯದಲ್ಲಿ ಲಿಂ. ಶಿವಯ್ಯಸ್ವಾಮಿ ವೀರಭದ್ರಯ್ಯ ಕೂಗು ಲಿಂ. ಶಿವಪ್ಪ ಮರಿತಮ್ಮಪ್ಪ ನಿಲೂಗಲ್, ಲಿಂ. ವಿರುಪಾಕ್ಷಪ್ಪ ತೋಟಪ್ಪ ಪಟ್ಟಣಶೆಟ್ಟಿ, ದಿ. ಲಕ್ಷ್ಮಣರಾವ್ ಅನಂತರಾವ್ ಪೊತ್ನೀಸ್ ಇವರುಗಳ ಸ್ಮರಣಾರ್ಥ ಏರ್ಪಡಿಸಲಾದ ದತ್ತಿ ಉಪನ್ಯಾಸವನ್ನು ಹುಬ್ಬಳ್ಳಿ ನಗರದ ಚಾರ್ಟರ್ಡ ಅಕೌಂಟಂಟರಾದ ಸುಮೀರಮಲ್ ಓಸ್ತವಾಲ್ ಇವರು ವಿಚಾರ ಸಂಕಿರಣವನ್ನು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆದಾಯ ತೆರಿಗೆ 2025ರಲ್ಲಿ ಪ್ರಿವಿಯಸ್ ಇಯರ್ ಹಾಗೂ ಅಸೆಸ್‌ಮೆಂಟ್ ಇಯರ್ ಬದಲಾಗಿ ಟ್ಯಾಕ್ಸ ಇಯರ್ ಎಂದು ಬದಲಾಯಿಸಿದ್ದಾರೆ. ಟಿ.ಡಿ.ಎಸ್. ದಂಡ ಹಾಗೂ ಇತರ ಬದಲಾವಣೆಗಳ ಬಗ್ಗೆ ಮಾಹಿತಿ ನೀಡಿದರು ಹಾಗೂ ಸರಕು ಮತ್ತು ಸೇವಾ ತೆರಿಗೆಯಲ್ಲಿ ಆದ ಬದಲಾವಣೆಗಳ ಬಗ್ಗೆ ವಿಶ್ಲೇಷಿಸಿದರು.

ಮತ್ತೋರ್ವ ಉಪನ್ಯಾಸರಾಗಿ ಆಗಮಿಸಿದ ಹುಬ್ಬಳ್ಳಿ ನಗರದ ವಿನಯ ಕುಲಕರ್ಣಿಯವರು 2026-2027ನೇ ಸಾಲಿನ ಮುಂಗಡ ಪತ್ರದ ಬಗ್ಗೆ ವಿಸರಿಸುತ್ತಾ ಮುಂಗಡ ಪತ್ರದಲ್ಲಿ




ವಿತ್ತೀಯ ಕೊರತೆ 16,95,768/- ಕೋಟಿ ಮೀರಿದ್ದು ಇದು ಜಿ.ಡಿ.ಪಿ.ಯು 4.3% ಇರುತ್ತದೆ ಎಂದು ಹೇಳುತ್ತಾ ಈ ಕೊರತೆಯನ್ನು ಜಿ.ಡಿ.ಪಿ ಯೊಂದಿಗೆ ತುಲನೆ ಮಾಡದೇ ಒಟ್ಟು ಸಂಭಾವ್ಯ ಆದಾಯದೊಂದಿಗೆ ತುಲನೆ ಮಾಡುವದು ಯೋಗ್ಯವೆನಿಸುತ್ತದೆ ಎಂದು ಹೇಳಿದರು. ಭಾರತ ಸರಕಾರದ ಒಟ್ಟು ಸಾಲ 31-3-2026ಕೆ ರೂ. 1,97,18,016 ಕೋಟಿ ಆಗಬಹುದಾದ ಸಂಭಾವ್ಯವ ಇರುತ್ತದೆ ಎಂದು ರಿಸೆಟ್ ಬಜೆಟ್ 2026-2027ನ್ನು ಉಲ್ಲೇಖಿಸಿ ಹೇಳಿದರು. ಒಟ್ಟು ಕೇಂದ್ರ ಸರಕಾರದ ಸಾಲ ಎತ್ತುವುದಕ್ಕೆ ಮೀತಿ ಹೇರುವುದು (ಜಿ.ಡಿ.ಪಿ.ಗೆ ಹೋಲಿಕೆ ಅಲ್ಲ) ಯೋಗ್ಯವಾಗುವುದು ಎಂದು ಅಭಿಪ್ರಾಯಪಟ್ಟರು ಕೇಂದ್ರ ಸರಕಾರದ ಆದಾಯದಲ್ಲಿ ಪ್ರತ್ಯೇಕ್ಷ ತೆರಿಗೆ ಪ್ರಮಾಣ ಏರುತ್ತಾ ಹೊಂದರೆ ಅದು ಉತ್ತಮ ತೆರಿಗೆ ವ್ಯವಸ್ಥೆಯ ನಿರ್ದೇಶನ ಎಂದು ತಿಳಿಸಿದರು.

ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶರಣಬಸಪ್ಪ ಸಂಗಪ್ಪ ಗುಡಿಮನಿ ಇವರು ವಹಿಸಿ ಮಾತನಾಡುತ್ತಾ ಈ ಸಾಲಿನ ಕೇಂದ್ರ ಮುಂಗಡ ಪತ್ರದಲ್ಲಿ ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿರುವುದಿಲ್ಲ ಜೊತೆಗೆ ಶಿಕ್ಷೆ ಬದಲಾಗಿ ದಂಡವನ್ನು ವಿಧಿಸಿದ್ದಾರೆ. ನಾವು ಕೂಡಾ ತೆರಿಗೆ ತುಂಬುವುದಾಗಲಿ ಮತ್ತು ರಿಟರ್ನ್ ಫೈಲ್ ಸರಿಯಾದ ಸಮಯಕ್ಕೆ ಮಾಡುವುದರಿಂದ ಯಾವುದೇ ರೀತಿಯಿಂದ ತೊಂದರೆಯಾಗುವುದಿಲ್ಲ ಬರುವ ದಿನಗಳಲ್ಲಿ ಪ್ರತ್ಯೇಕವಾಗಿ ಲೆಕ್ಕ ಪರಿಶೋಧಕರು, ತೆರಿಗೆ ಸಲಹೆಗಾರರು ಮತ್ತು ವ್ಯಾಪಾರಸ್ಥರ ಸಭೆಯನ್ನು ಆಯೋಜಿಸಿ ಚರ್ಚಿಸಲಾಗುತ್ತದೆ. ತಾವು ಎಲ್ಲರೂ ಪ್ರತಿಯೊಂದು ಸಭೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಪ್ರಥಮದಲ್ಲಿ ಸ್ವಾಗತವನ್ನು ಸಂಸ್ಥೆಯ ಸಹ ಗೌರವ ಕಾರ್ಯದರ್ಶಿಗಳಾದ ರಾಘವೇಂದ್ರ ಎಸ್.ಕಾಲವಾಡ ಇವರು ಸಭೆಗೆ ಆಗಮಿಸಿದ ಸರ್ವರವನ್ನು ಹೃತ್ಪೂರ್ವಕವಾಗಿ ಸ್ವಾಗಿಸಿದರು. ಪ್ರಾಸ್ತಾವಿಕವಾಗಿ ಸಂಸ್ಥೆಯ ದತ್ತಿ ಉಪನ್ಯಾಸ ಉಪ ಸಮಿತಿ ಚೇರಮನ್ನರಾದ ಶ್ರೀ ದಾನಯ್ಯ ವೀರಯ್ಯ ಗಣಾಚಾರಿ ಇವರು ಮಾಡಿದರು. ಲಿಂಗೈಕ್ಯರಾದ ಮಹನೀಯರ ಪರಿಚಯವನ್ನು ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಯದೇವ ಎಂ. ಮೆಣಸಗಿ ಇವರು ಮಾಡಿದರು. ಕಾರ್ಯಕ್ರಮ ನಿರೂಪಣೆಯನ್ನು ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಚನ್ನವೀರಪ್ಪ ಪ್ರಭಣ್ಣ ಹುಣಸಿಕಟ್ಟಿ ಇವರು ಮಾಡಿ ಕೊನೆಯಲ್ಲಿ ವಂದಿಸಿದರು.

ಈ ವಿಚಾರ ಸಂಕಿರಣಕ್ಕೆ ಸಂಸ್ಥೆಯ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು, ಮಾಜಿ ಅಧ್ಯಕ್ಷರು, ತೆರಿಗೆ ಸಲಹೆಗಾರರ ಸಂಘದ ಸದಸ್ಯರು, ಎಲ್ಲಾ ಲೆಕ್ಕ ಪರಿಶೋಧಕರ ಸಂಘದ ಸದಸ್ಯರು ಹಾಗೂ ಸರ್ವ ಸದಸ್ಯರು ಪಾಲ್ಗೊಂಡಿದ್ದರೆಂದು ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಚನ್ನವೀರಪ್ಪ ಪ್ರಭಣ್ಣ ಹುಣಸಿಕಟ್ಟಿ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂತ ಸೇವಾಲಾಲರ ಜಯಂತಿ

❑ ಸ್ನೇಹಜೀವಿ ನ್ಯೂಸ್

ಗದಗ, ಫೆ. 12 : ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾ0ಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವರುಗಳ ಸಹ0ಯೋಗದಲ್ಲಿ ಸಂತ ಸೇವಾಲಾಲರ ಜ0ಯಂತಿ0ಯನ್ನು ಫೆಬ್ರುವರಿ 17ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ಆಡಿಟೋರಿ0ಯಂ ಹಾಲ್ ದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಡಾ.ಶಿವರಾಜ ಎಸ್.ತಂಗಡಗಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಉದ್ಘಾಟನೆ ಹಾಗೂ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ , ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕ ಜಿ.ಎಸ್.ಪಾಟೀಲ, ಹಾವೇರಿ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡರ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಡಿ.ಆರ್.ಪಾಟೀಲ, ನರಗುಂದ ಶಾಸಕ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕರುಗಳಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾದಿಕಾರದ ಅಧ್ಯಕ್ಷರಾದ ಅಕ್ಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಯೋಜನೆ ಕಾರ್ಯಕ್ರಮಗಳು, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಶ್ರೀಮತಿ ಜಾನಕಿ ಕೆ.ಎಂ, ಆಗಮಿಸಲಿದ್ದಾರೆ.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಹರಿಲಾಲ ಪವಾರ ಉಪನ್ಯಾಸ ನೀಡುವರು.

ಜಿಲ್ಲಾಧಿಕಾರಿ ಹಾಗೂ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ ವರಿಷ್ಟಾದಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ ಡಾ. ದುರಗೇಶ್ ಕೆ.ಆರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾ0ಯಕ ನಿರ್ದೇಶಕ ಬಸವರಾಜ ವ್ಹಿ.ಬಳ್ಳಾರಿ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಅರ್ಜಿ ಆಹ್ವಾನ

ಗದಗ, ಫೆ. 12 : 2025-26 ನೇ ಸಾಲಿನಲ್ಲಿ 2026-27 ನೇ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯ 2 ಗದಗ ಜಿಲ್ಲೆಯ ಆದರ್ಶ ವಿದ್ಯಾಲಯಗಳಲ್ಲಿ 6 ನೇ ತರಗತಿ ದಾಖಲಾತಿಯ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನ ಫೆಬ್ರುವರಿ 25 ಆಗಿದ್ದು ಪರೀಕ್ಷಾ ದಿನಾಂಕ ಮಾರ್ಚ 15 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿ.ಎಂ.ಮುಂದಿನಮನಿ ನೋಡಲ್ ಅಧಿಕಾರಿಗಳು, ಡಯಟ್ ಗದಗ ಮೊಬೈಲ್ ಸಂ: 7619277145 ಸಂಪರ್ಕಿಸಬಹುದಾಗಿದೆ.

## ಅಕಾಡೆಮಿ ಬಾಲಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನ

ಗದಗ, ಫೆ. 12 : ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ 2024-25 ಹಾಗೂ 2025-26 ನೇ ಸಾಲಿನಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಂದ ಬಾಲಗೌರವ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಕ್ಕಳು ಕ್ರೀಡೆ, ಸಂಗೀತ, ನೃತ್ಯ, ಬಹುಮುಖ ಪ್ರತಿಭೆ, ನಟನೆ, ಚಿತ್ರಕಲೆ, ಹಾಗೂ ವಿಜ್ಞಾನ ಮತ್ತು ಸಂಶೋಧನೆ 0ಯಾವುದಾದರೂ ಒಂದು ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ0ಯನ್ನು ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು. ಇಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ತಮ್ಮ ಸ್ವ0ಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವವಿವರಗಳನ್ನೊಳಗೊಂಡ ಮನವಿ0ಯೊಂದಿಗೆ ಅರ್ಜಿ0ಯನ್ನು ಪೆಬ್ರುವರಿ 20 ರೊಳಗಾಗಿ ಕಛೇರಿ0ಯ ವೇಳೆ0ಯಲ್ಲಿ ಅಕಾಡೆಮಿ0ಯ ಕೇಂದ್ರ ಕಚೇರಿಗೆ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಗದಗ ಜಿಲ್ಲೆ0ಯ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಛೇರಿ0ಯಲ್ಲಿ ಹಾಗೂ ಆಕಾಡೆಮಿ0ಯ ಕೇಂದ್ರ ಕಛೇರಿ0ಯಲ್ಲಿ ಅರ್ಜಿ ನಮೂನೆ0ಯನ್ನು ಪಡೆ0ಯುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಕಛೇರಿ ವಿಳಾಸ: 0ಯೋಜನಾಧಿಕಾರಿಗಳು ಚಂದ್ರಿಕಾ ಲೇ ಔಟ್ ಹಿಂಬಾಗ ಕೆ.ಎಚ್.ಬಿ. ಕಾಲೋನಿ ಲಕಮನಹಳ್ಳಿ ಧಾರವಾಡ -580004 ದೂರವಾಣಿ ಸಂಖ್ಯೆ :0836-2465490 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು 8050392209, 7204396275, 9448981944

### ಚೇತನ ಕರಾಟೆ ಕ್ಲಬ್‌ನಿಂದ ತರಬೇತಿ ಶಿಬಿರಕ್ಕೆ ಚಾಲನೆ

# ಆತ್ಮ ರಕ್ಷಣೆಗಾಗಿ ಆತ್ಮ ವಿಶ್ವಾಸ ಮೂಡಿಸುವ ಕರಾಟೆ ಕಲಿಯಿರಿ

❑ ಸ್ನೇಹಜೀವಿ ನ್ಯೂಸ್

ಲಕ್ಕುಂಡಿ, ಫೆ. 12 ದೈಹಿಕ, ಮಾನಸಿಕವಾಗಿ ಆತ್ಮಸ್ಥೈರ್ಯ ತುಂಬುವ ಕರಾಟೆ ವ್ಯಾಯಾಮವನ್ನು ಬಾಲಕ. ಬಾಲಕಿಂ-ಯರು ತರಬೇತಿ ಪಡೆದುಕೊಂಡು ಇಂದಿನ ಬದುಕಿನಲ್ಲಿ ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಬಹುದಾಗಿದೆ ಎಂದು ಗ್ರಾಮ ಪಂಚಾಯತ ನಿವೃತ್ತ ಕಾರ್ಯದರ್ಶಿ ಶಿವಪ್ಪ ಸಜ್ಜನರ ಹೇಳಿದರು.

ಇಲ್ಲಿಯ ದುರ್ಗಾದೇವಿ ಸಭಾ ಭವನದಲ್ಲಿ ಚೇತನ ಕರಾಟೆ ಕ್ಲಬ್ ಏರ್ಪಡಿಸಲಾಗಿದ್ದ ಕರಾಟೆ, ಲಾಠಿ ತರಬೇತಿ ಶಿಬಿರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬಾಲಕ, ಬಾಲಕಿಯರು ತಮ್ಮ ಆತ್ಮ ಸ್ಥೈರ್ಯ ತುಂಬಲು ಕರಾಟೆ, ಲಾಠಿ, ಯೋಗ , ಧ್ಯಾನ ಇಂದು ಅವಶ್ಯವಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಈ ತರಬೇತಿ ಶಿಬಿರಕ್ಕೆ ಪ್ರವೇಶ ಪಡೆಯಬೇಕು. ಇದರಲ್ಲಿ ಕೌಶಲ್ಯವಂತಾರಾದ ಕರಾಟೆ ಪಟುಗಳನ್ನು ಗ್ರಾಮದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನ ಮಾಡಿಸಬೇಕು ಅಂದಾಗ ಬೇರೊಬ್ಬರ ಮೇಲೆ ಪರಿಣಾಮವಾಗಿ ಹೆಚ್ಚೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ ಎಂದು ಸಲಹೆ ನೀಡಿದರು.

ಅಶೋಕ ಬೂದಿಹಾಳ ಅವರು ಮಾತನಾಡಿ ಕಳೆದ 8 ವರ್ಷಗಳಿಂದ ಗ್ರಾಮದಲ್ಲಿ ಕರಾಟೆ ತರಬೇತಿ ನೀಡುತ್ತಿರುವ ಚೇತನ ಕರಾಟೆ ಕ್ಲಬ್ ರಾಜ್ಯ ಮಟ್ಟದವರೆಗೂ ಕರಾಟೆ ಸ್ಪರ್ಧೆಯಲ್ಲಿ ಪಾಲ್ಗೊಂಡು ಯಶಸ್ಸು ಗಳಿಸಿದ್ದು ಸಂತಸ ವಿಷಯವಾಗಿದೆ. ಉತ್ಸವನ ನಡೆಯುತ್ತಿರುವ ಹಳೆಯ





ಹೈಸ್ಕೋಲ್ ಕಟ್ಟಡದಲ್ಲಿ ತರಬೇತಿ ನಡೆಯುತ್ತಿತ್ತು. ಈಗ ಅದನ್ನು ತೆರವುಗೊಳಿಸಿದ್ದರೆ ಹಿನ್ನೆಲೆಯಲ್ಲಿ ಕಟ್ಟಡದ ಸಮಸ್ಯೆಯಾಗಿದ್ದು ಗ್ರಾಮ ಪಂಚಾಯತಿಯ ಖಾಲಿ ಇರುವ ಕಟ್ಟಡವನ್ನು ಕರಾಟೆ ತರಬೇತಿ ಕೇಂದ್ರಕ್ಕೆ ಕೊಡಿಸಲು ಅಧಿಕಾರಗಳೊಂದಿಗೆ ಚರ್ಚೆ ಮಾಡಲಾಗುವುದು. ಎಂದರು.

ಗಂಗಾಧರ ಸಾಸ್ವಿಹಳ್ಳಿ ಅವರು ಮಾತನಾಡಿ 8 ವರ್ಷಗಳಿಂದ ಗ್ರಾಮದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದು ಇಲ್ಲಿ ಕಲಿತ ವಿದ್ಯಾರ್ಥಿಗಳು ರಾಷ್ಟ್ರ, ರಾಜ್ಯ ಮಟ್ಟದವರೆಗೂ ಸ್ಪರ್ದಿಸಿ ಪ್ರಶಸ್ತಿ ಪಡೆದಿದ್ದಾರೆ. ಇಲ್ಲಿ ವೈಟ್ ಬೆಲ್ಟನಿಂದ ಬ್ಲ್ಯಾಕ್ ಬೆಲ್ಟವರೆಗೂ ತರಬೇತಿ ನೀಡಲಾಗುವುದು. ಈ ವರ್ಷ 4 ವಿದ್ಯಾರ್ಥಿಗಳು ಬ್ಲಾಕ್ ಬೆಲ್ಟ ತರಬೇತಿ ಪಡೆಯುವ ಹಂತದಲ್ಲಿದ್ದಾರೆ. ಎಂದು ವಿವರಿಸಿದ ಅವರು ಆತ್ಮರಕ್ಷಣೆ ಮಾಡಿಕೊಳ್ಳಲು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಹೆಚ್ಚುವುದು, ಧ್ಯಾನ, ಲಾಠಿ ತರಬೇತಿ ನೀಡಲಾಗುವುದು. ಗ್ರಾ. ಪಂ ಮಾಜಿ ಉಪಾಧ್ಯಕ್ಷೆ ಪ್ರೇಮಾ ಮಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು.

ತರಬೇತಿ ಪಡೆದ ಮಕ್ಕಳು ಕರಾಟೆ, ಲಾಠಿಯ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಅನುಭವ ಹಂಚಿಕೊಂಡರು. ಮಾಜಿ ಯೋಧ ಪಿ.ಎಸ್.ಗುಂಡಳ್ಳಿ, ಮಂಜುನಾಥ ಪುರದ, ನೀಲವ್ವ ವಡ್ಡರ ವೇದಿಕೆಯಲ್ಲಿದ್ದರು , ಶಿಕ್ಷಕ ಮುತ್ತುರಾಜ್ ಗಡ್ಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಹೆತ್ತ ತಾಯಿಯನ್ನೇ ಕೊಂದು ಹೃದಯಾಘಾತದ ಕಥೆ ಕಟ್ಟಿದ್ದ ಮಗಳು! ಸಿನಿಮೀಯ ರೀತಿಯಲ್ಲಿ ಬಯಲಾಯ್ತು ರಹಸ್ಯ

**ಹೆತ್ತ ತಾಯಿಯನ್ನೇ ಕೊಂದು ಹೃದಯಾಘಾತದ ಕಥೆ ಕಟ್ಟಿದ್ದ ಮಗಳು! ಸಿನಿಮೀಯ ರೀತಿಯಲ್ಲಿ ಬಯಲಾಯ್ತು ರಹಸ್ಯ ಆ ಸಾವು ಹೇಗಾಯ್ತು ಎಂಬುದು ಯಾರಿಗೂ ತಿಳಿದಿರಲಿಲ್ಲ. ಮಧ್ಯರಾತ್ರಿ ಸಂಬಂಧಿಕ-ರಿಗೆ ಕರೆ ಮಾಡಿದ ಮಹಿಳೆ, ತಾಯಿ ಹೃದಯಾಘಾತದಿಂದ ಸಾವನಪ್ಪಿದ್ದಾಗಿ ತಿಳಿಸಿದ್ದಳು. ತಾಯಿಯ ಕೊನೆಯ ಆಸೆ ಗಂಡನ ಗೋರಿ ಪಕ್ಕವೇ ಹೂಳಬೇಕೆಂಬುದಾಗಿ-ತ್ತು. ಹಾಗಂತ ರಾತ್ರೋ ರಾತ್ರಿ ಶವ ತಂದ ಮಗಳು ಬೆಳಿಗ್ಗೆ ಅಂತ್ಯಕ್ರಿಯೆ ಮಾಡುವ ತರಾತು-ರಿಯಲ್ಲಿದ್ದಳು. ಈ ನಡುವೆ ಎಂಟ್ರಿ ಕೊಟ್ಟ ಪೊಲೀಸರು ಭಯಾನಕ ಮಾಹಿತಿಯನ್ನು ಬಯಲಿಗೆಳೆದಿದ್ದಾರೆ.**



❑ ಸ್ನೇಹಜೀವಿ ನ್ಯೂಸ್

ತುಮಕೂರು, ಫೆಬ್ರವರಿ 13: ತುಮಕೂರು ನಗರದ ಬಂಡೇಪಾಳ್ಯ ಬಳಿಯ ಶ್ರೀನಗರ ನಿವಾಸಿ ಪುಷ್ಪಲತಾ ಸ್ವಂತ ಸೂರು ಕಟ್ಟಿಕೊಂಡು ಮಗಳು ಸುಚಿತ್ರಾ ಹಾಗೂ ಅಳಿಯನ ಜೊತೆ ವಾಸವಿದ್ದರು. ಕಳೆದ ಕೆಲ ದಿನಗಳಿಂದ ಮಂಡಿನೋವು ಎಂದು ಹಾಸಿಗೆ ಹಿಡಿದಿದ್ದರು. ಫೆಬ್ರವರಿ 11 ರಂದು ರಾತ್ರಿ ನಿಗೂಢವಾಗಿ ಸಾವನಪ್ಪಿದ್ದಾರೆ. ಆಕೆಯ ಜೊತೆಗೆ ವಾಸವಿದ್ದ ಮಗಳು ಹೃದಯಾಘಾತ ಎಂದು ಅಂತ್ಯಕ್ರಿಯೆ ಮಾಡಲು ಮುಂದಾಗಿದ್ದಳು. ಆದರೆ, ಅದೇ ಸಮಯಕ್ಕೆ, ಕೆಲವು ಮಂದಿ ಸ್ಥಳೀಯರು ಅನುಮಾನದಿಂದ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಬಂದ ಪೊಲೀಸರು ಸಾವಿನ ಹಿಂದಿನ ಅಸಲಿ ಸತ್ಯ ಬಯಲು ಮಾಡಿದ್ದಾರೆ. ಪುಷ್ಪಲತಾ ಹೃದಯಾಘಾತದಿಂದ ಸಾವನ್ನಪ್ಪಿಲ್ಲ, ಕೊಲೆಯಾಗಿದ್ದಾರೆ ಎಂಬುದನ್ನು ಬಯಲುಮಾಡಿದ್ದಾರೆ. ಪುಷ್ಪಲತಾರನ್ನು ಕೊಲೆ ಮಾಡಿದ್ದು, ಮತ್ಯಾರೂ ಅಲ್ಲ. ಆಕೆಯ ಮಗಳೇ!

## ತಂದೆಯ ಸಾವಿನ ಬಗ್ಗೆ ಜ್ಯೋತಿಷಿ ಹೇಳಿದ್ದನ್ನು ಕೇಳಿ ತಾಯಿಯ ಕೊಲೆ ಮಾಡಿದಳಾ ಮಗಳು?

ಸುಚಿತ್ರಾ ಹಾಗೂ ಆಕೆಯ ಪತಿ ಸುರೇಶ್ ಸಹ ಪುಷ್ಪಲತಾ ಮನೆಯಲ್ಲಿಯೇ ವಾಸವಿದ್ದರು. ಸುರೇಶ ಕೊರಿಯರ್ ಕಂಪನಿಯಲ್ಲಿ ಕೆಲಸ ಮಾಡುತಿದ್ದ. ಆತನ ದುಡಿಮೆಯಲ್ಲೇ ಜೀವನ ಸಾಗುತಿತ್ತು ಎನ್ನಲಾಗಿದೆ. ಒಂದು ವರ್ಷದ ಹಿಂದೆ ಇದ್ದಕಿದ್ದಂತೆ ಆರೋಗ್ಯ ಸಮಸ್ಯೆಗೆ ಒಳಗಾದ ಪುಷ್ಪಲತಾ ಗಂಡ ಬಾಬು ನಾಯಕ್ ಮೃತಪಟ್ಟಿದ್ದರು. ತಂದೆಯ ಮುದ್ದಿನ ಮಗಳು ಸುಚಿತ್ರಾ, ಅವರನ್ನು ಕಳೆದುಕೊಂಡಿದ್ದ ದುಃಖದಲ್ಲಿದ್ದ ಜ್ಯೋತಿಷಿಯೊಬ್ಬರ ಭೇಟಿ ಮಾಡಿದ್ದಳು. ಈ ವೇಳೆ ಬಾಬು ಸಾವಿಗೆ ಆತನ ಪತ್ನಿಯೇ ಕಾರಣ. ಪುಷ್ಪಲತಾ ಮಾಟಮಂತ್ರ ಮಾಡಿಸಿದ್ದರು. ನಿನಗೂ ಅವರಿಂದ ಕಂಟಕ ಇದೆ ಎಂದು ಜ್ಯೋತಿಷಿ ಹೇಳಿದ್ದರು ಎನ್ನಲಾಗಿದೆ.

ಈ ಮಾತು ಕೇಳಿದ ಸುಚಿತ್ರಾ, ತನ್ನ ಪ್ರೀತಿಯ ತಂದೆಯನ್ನು ಕೊಂದಿದ್ದಾಳೆಂಬ ಅಲೋಚನೆ ಹಾಗೂ ತಾನೂ ಈಕೆಯಿಂದ ಸಾಯಬಹುದೆಂಬ ಆತಂಕದಲ್ಲಿ ಫೆಬ್ರವರಿ 11ರ ರಾತ್ರಿ ಊಟ ಮಾಡಿ ಮಲಗಿದ್ದ ತಾಯಿಯನ್ನು ದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿದ್ದಾಳೆ. ಈ ವೇಳೆ ಹಲ್ಲೆ ಸಹ ಮಾಡಿದ್ದಳು ಎನ್ನಲಾಗಿದ್ದು, ಮುಖದಲ್ಲಿ ರಕ್ತಕಲೆಗಳು ಕಾಣಿಸಿವೆ. ಈ ಎಲ್ಲಾ ವಿಚಾರ ಗೊತ್ತಿದ್ದ ಸುಚಿತ್ರಾ ಗಂಡ ಮೌನವಹಿಸಿದ್ದ. ಪೊಲೀಸರ ತನಿಖೆ ವೇಳೆ ಆತ ಸಹ ಪರೋಕ್ಷವಾಗಿ ಶಾಮೀಲಾಗಿರುವ ಅಂಶಗಳು ಕಂಡು ಬಂದಿವೆ. ಸದ್ಯ ಸುಚಿತ್ರಾ ಹಾಗೂ ಆಕೆಯ ಪತಿ ಸುರೇಶ್ ಅನ್ನು ಕ್ಯಾತಸಂದ್ರ ಪೊಲೀಸರು ಬಂಧಿಸಿದ್ದಾರೆ.

ಹಣದ ವಿಚಾರವೇ ಕಾರಣವಾಯ್ತಾ?:ಕೊಲೆ ಮಾಡಿರುವುದಾಗಿ ಕ್ಯಾತಸಂದ್ರ ಪೊಲೀಸರ ವಿಚಾರಣೆ ವೇಳೆ ಒಪ್ಪಿಕೊಂಡಿರುವ ಸುಚಿತ್ರಾ ಜ್ಯೋತಿಷಿ ಕಥೆ ಹೇಳಿದ್ದಾಳೆ. ಆದರೆ, ಅದರ ಜತೆಗೆ ಒಂದಷ್ಟು ಹಣದ ವಿಚಾರ ಸಹ ಕಾರಣ ಇರಬಹುದೆಂಬ ಶಂಕೆ ವ್ಯಕ್ತವಾಗಿದೆ. ಇತ್ತೀಚಿಗೆ ಜಾಗ ಮಾರಿ ಬಂದ ಲಕ್ಷಾಂತರ ರೂ. ಹಣವನ್ನು ಪುಷ್ಪಲತಾ ತಾನೇ ಇಟ್ಟುಕೊಂಡಿದ್ದಳು ಎನ್ನಲಾಗಿದೆ. ಅದೇ ವಿಚಾರವಾಗಿ ಜಗಳ ನಡೆದು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ಎಲ್ಲ ಆಯಾಮಗಳಿಂದ ತನಿಖೆ ನಡೆಸುತ್ತಿದ್ದಾರೆ.

ತಾನೇ ಕೊಂದು ಕಥೆ ಕಟ್ಟಿದ್ದ ಸುಚಿತ್ರಾ, ತಾವು ವಾಸವಿದ್ದ ಶ್ರೀನಗರದ ಮನೆಯಿಂದ ತುಮಕೂರು ತಾಲ್ಲೂಕಿನ ಅನುಪನಹಳ್ಳಿಯ ಸಂಬಂಧಿಕರ ಮನೆಗೆ ಬೆಳ್ಳಂಬೆಳಿಗ್ಗೆಯೇ ಶವ ತಂದಿದ್ದು, ಯಾರಿಗೂ ಗೊತ್ತಾಗದ ರೀತಿ ಎಲ್ಲರ ಸಮ್ಮುಖದಲ್ಲಿ ಅಂತ್ಯಕ್ರಿಯೆ ಮಾಡಲು ಮುಂದಾಗಿದ್ದಳು ಎಂಬುದೂ ವಿಚಾರಣೆ ವೇಳೆ ಗೊತ್ತಾಗಿದೆ. ಈ ವಿಚಾರ ತಿಳಿದ ಸಂಬಂಧಿಕರು ಆಘಾತಕ್ಕೊಳಗಾಗಿದ್ದಾರೆ.

## ಪೊಲೀಸರು ಎಂಟ್ರಿಯಾಗಲು ಕಾರಣವೇನು?:

**ಇತ್ತೀಚೆಗೆ ಶ್ರೀನಗರದ ಬಳಿ ತಾಯಿ ಹಾಗೂ ಮಗಳ ನಡುವೆ ಗಲಾಟೆ ನಡೆದಿತ್ತು ಎನ್ನಲಾಗಿದೆ. ಹೀಗಾಗಿ ಪುಷ್ಪಲತಾ ಸಾವಿ ವಿಚಾರ ತಿಳಿದವರು ಮೊದಲು ಪೊಲೀಸರಿಗೆ ಮಾಹಿತಿ ನೀಡಿ ಬಳಿಕ ಶವ ಹೂಳುವ ಸಂದರ್ಭದಲ್ಲಿ ಗಲಾಟೆ ಮಾಡಿದ್ದರು ಎನ್ನಲಾಗಿದೆ. ಆ ಬಳಿಕ ಬಂದ ಪೊಲೀಸರು ನಡೆಸಿದ ವಿಚಾರಣೆ ವೇಳೆ ಕೊಲೆ ಸಂಗತಿ ಬಯಲಾಗಿದೆ. ಆದ-'ರೆ, ಜ್ಯೋತಿಷಿ ಹೇಳಿದ ಕಾರಣಕ್ಕೆ ಕೊಲೆಯಾಯ್ತಾ ಅಥವಾ ಹಣಕ್ಕಾಗಿ ಹತ್ಯೆಯಾಯಿತಾ ಎಂಬ ವಿಚಾರ ತನಿಖೆಯಿಂದ ಬಯಲಾಗಬೇಕಿದೆ.**

## ಶಿವಾನಂದ ನೂತನ ಎಸಿಪಿ



**ಹುಬ್ಬಳ್ಳಿ :** ಹು-ಧಾ ಮಹಾನಗರ ಉತ್ತರ ವಿಭಾಗದ ಎಸಿಪಿಯಾಗಿ ಸಿಐಡಿ ವಿಭಾಗದಲ್ಲಿ ಡಿವೈಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿವಾನಂದ ಚಲವಾದಿ ಅವರನ್ನು ನೇಮಕ ಮಾಡಲಾಗಿದೆ.

ಧಾರವಾಡ ಶಹರ ಠಾಣೆಗೆ ಗುರುನಾಥ ಚವ್ಹಾಣ್, ಗೋಕುಲ ಠಾಣೆಗೆ ಸಂಗಮೇಶ ದಿಡಿಗಿನಾಳ, ಮಹಿಳಾ ಠಾಣೆಗೆ ರತ್ನಾ ಭರಮಪ್ಪನವರ ಅವರನ್ನು ಇನ್‌ಸ್ಪೆಕ್ಟರ್ ಹುದ್ದೆಗೆ ನಿಯೋಜಿಸಲಾಗಿದೆ.

# ಡಕಾಯಿತಿ ಕೇಸ್‌ನಲ್ಲಿ ಕಾನ್‌ಸ್ಟೆಬಲ್ ಬಂಧನ !

## ಕಳ್ಳರಿಗೆ ಮನೆ ತೋರಿಸಿದ್ದ ಪೊಲೀಸ್ ಪ್ರದೀಪ ನಾಯಕ ವಿರುದ್ಧ ಶಿಸ್ತು ಕ್ರಮ; ಎಸ್‌ಪಿ ಯಶೋಧಾ ವಂಟಗೋಡಿ

❑ ಸ್ನೇಹಜೀವಿ ನ್ಯೂಸ್

**ಹಾವೇರಿ: ಹಿರೇಕೆರೂರ ತಾಲೂಕಿನ ನಿಡನೇಗಿಲು ಗ್ರಾಮದಲ್ಲಿ ಮನೆಯೊಂದರಲ್ಲಿ ಡಕಾಯಿತಿ ಮಾಡಲು ಜಿಲ್ಲಾ ಸಶ್ತ್ರ ಮೀಸಲು ಪಡೆ (ಡಿಆರ್)ನ ಪೊಲೀಸ್ ಕಾನ್‌ಸ್ಟೆಬಲ್ ಸಹಕ-ರಿಸಿದ್ದ ಆತಂಕಕಾರಿ ಅಂಶ ಪತ್ತೆಯಾಗಿದ್ದು, ಕಳ್ಳರ ಜತೆಗೆ ಈತನನ್ನೂ ಬಂಧಿಸಲಾಗಿದೆ. ಈತನನ್ನು ಅಮಾನತು ಮಾಡಿ, ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.**

ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳ್ಳತನ ನಡೆಸಿದ ಆರೋಪಿತರಾದ ಬ್ಯಾಡಗಿ ತಾಲೂಕು ಶಿಡೇನೂರ ಗ್ರಾಮದ ಮಲ್ಲೇಶಪ್ಪ ವೆಂಕಪ್ಪ ನಾಯ್ಕ, ಬಾಗಲಕೋಟೆ ಬದಾಮಿ ತಾಲೂಕು ಕೆರೂರ ಗ್ರಾಮದ ಕಾಂತೇಶ ಮುತ್ತಪ್ಪ ವಡ್ಡರ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಬೆಳವಡಿಯ ಅಜೇಯ ಹನುಮಂತ ಸಾಲಹಳ್ಳಿ, ನಾಗರಾಜ ಹನುಮಂತ ವಡ್ಡರ ಹಾಗೂ ಸಹಕರಿಸಿದ ಆರೋಪಿ ಡಿಆರ್ ಪೊಲೀಸ್ ಕಾನ್‌ಸ್ಟೆಬಲ್, ಹಿರೇಕೆರೂರ ತಾಲೂಕು ಮುದ್ದಿನಕೊಪ್ಪ ನಿವಾಸಿ ಪ್ರದೀಪ ಹನುಮಂತಪ್ಪ ನಾಯ್ಕ (37)ನನ್ನು ಬಂಧಿಸಲಾಗಿದೆ ಎಂದು ವಿವ-ರಿಸಿದರು.

ಪೊಲೀಸ್ ಇಲಾಖೆಗೆ ಮುಜುಗರ ತರುವ ಕೆಲಸದಲ್ಲಿ ಸಿಬ್ಬಂದಿ ಭಾಗಿಯಾಗಿದ್ದು, ಈತನನ್ನು ಕೆಲಸದಿಂದ ಅಮಾನತು ಮಾಡಿ, ಇಲಾಖೆ ಮಟ್ಟದಲ್ಲಿ ತನಿಖೆ ಮಾಡಲಾಗುವುದು. ನಿರ್ದಾಕ್ಷಿಣಾಟಿಜಜಜಿಟಿಜಜಣ್ಯ ಕ್ರಮ ಜರುಗಿಸಲಾಗುವುದು. ಈತ 2008ರ ಬ್ಯಾಚ್ ಸಿಬ್ಬಂದಿಯಾಗಿದ್ದು, ನಾಲ್ಕು ವರ್ಷ ಹಿರೇಕೆರೂರ ಸಿಪಿಐ ಚಾಲಕನಾಗಿದ್ದ. ಇತ್ತೀಚೆಗೆ ಹಾವೇರಿ ಡಿಆರ್ ವಿಭಾಗದಲ್ಲಿದ್ದ. ಯಾಕೆ ಇಂತಹ ಕೃತ್ಯ ಎಸಗಿದ ? ಆರೋಪಿತರೊಂದಿಗೆ ಹೇಗೆ ಸಂಬಂಧ ಬೆಳೆಯಿತು ? ಎಂಬಿತ್ಯಾದಿ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಆರೋಪಿತರಿಂದ 52 ಸಾವಿರ ನಗದು, 7.71 ಗ್ರಾಂ ಚಿನ್ನ, ಕೃತ್ಯಕ್ಕೆ ಬಳಸಿದ್ದ ಬೈಕ್ ಸೇರಿ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ರೋಪಿತರು ಚಿನ್ನವನ್ನು ಫೈನಾನ್ಸ್ ಒಂದರಲ್ಲಿ ಒತ್ತೆ ಇಟ್ಟು ಹಣ ಸಾಲ ಪಡೆದಿದ್ದರು ಎಂದು ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಎಸ್‌ಪಿ ಲಕ್ಷ್ಮಣ ಶಿರಕೋಳ, ರಾಣೆಬೆನ್ನೂರ ಡಿವೈ-ಎಸ್‌ಪಿ ಲೋಕೇಶ ಇದ್ದರು.

### ಮಂಕಿ ಕ್ಯಾಪ್ ಧರಿಸಿ, ಚಾಕು ತೋರಿಸಿ ದರೋಡೆ..

ಜ.19ರಂದು ರಾತ್ರಿ ಹಿರೇಕೆರೂರ ತಾಲೂಕು ನಿಡನೇಗಿಲು ಗ್ರಾಮದ ಮಲ್ಲನಗೌಡ ಪಾಟೀಲ ಎಂಬುವರ ಮನೆಯ ಹಿಂಬಾಗಿಲು ಮು-ರಿದು ಐವರು ಡಕಾಯಿತರು ಮಂಕಿ ಕ್ಯಾಪ್ ಹಾಕಿಕೊಂಡು ನುಗ್ಗಿದ್ದರು. ಮನೆಯಲ್ಲಿದ್ದ ಐವರಿಗೆ ಚಾಕು ತೋರಿಸಿ ಬೆದರಿಸಿ, 5 ಲಕ್ಷ ರೂ. ನಗದು, 40 ಗ್ರಾಂ ಚಿನ್ನಾಭರಣ, 244 ಗ್ರಾಂ ಬೆಳ್ಳಿ ದೋಚಿ ಪರಾರಿಯಾಗಿದ್ದರು. ಈ ಕುರಿತು ಹಿರೇಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ರಾಣೆಬೆನ್ನೂರ ಡಿವೈಎಸ್‌ಪಿ ಲೋಕೇಶ ನೇತೃತ್ವದಲ್ಲಿ 4 ವಿಶೇಷ ತಂಡ ರಚಿಸಿ ಆರೋಪಿಗಳನ್ನು ಬಂಧಿಸಲಾಗಿತ್ತು. ಬಂಧಿತ ಆರೋಪಿಗಳ ವಿಚಾರಣೆ ವೇಳೆ ಕಾನ್‌ಸ್ಟೆಬಲ್ ಪ್ರದೀಪ ನಾಯ್ಕ ಇದೇ ಮನೆಯಲ್ಲಿ ಕಳ್ಳತನ ಮಾಡುವಂತೆ ಸಹಕ-ರಿಸಿದ್ದರು ಎಂದು ಮಾಹಿತಿ ನೀಡಿದ್ದರು. ಈ ಕುರಿತು ಪರಿಶೀಲನೆ ನಡೆಸಿ,

ಆರೋಪಿ ಕಾನ್‌ಸ್ಟೆಬಲ್ ಪ್ರದೀಪನನ್ನು ಬಂಧಿಸಲಾಗಿದೆ ಎಂದು ಎಸ್‌ಪಿ ಯಶೋಧಾ ತಿಳಿಸಿದರು.

# ಗಾಂಧೀಜಿ ಕಂಡ ಗ್ರಾಮ ಸ್ವರಾಜ್ ನನಸಾಗಲಿ: ಡಿ.ಆರ್.ಪಾಟೀಲ



ನರೇಗಲ್: ಗ್ರಾಮ ಪಂಚಾಯಿತಿ ಆಡಳಿತ, ಆರ್ಥಿಕ ಪಾರದರ್ಶ ಕತೆ, ವಿಕೇಂದ್ರೀಕೃತಯೋ ಜನೆ ಮತ್ತು ಜನರ ಸಹಭಾಗಿತ್ವದೊಂದಿಗೆ ಗಾಂಧಿ ಕಂಡ ಗ್ರಾಮ ಸ್ವರಾಜ್ ನನಸಾಗಬೇಕಿದೆ ಎಂದು ರಾಜ್ಯ ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಹೇಳಿದರು.

ನರೇಗಲ್ ಸಮೀಪದ ಅಬ್ಬಿಗೇರಿ ಗ್ರಾಮ ಪಂಚಾಯಿತಿ ಆಶ್ರಯದಲ್ಲಿ ನಡೆದ 2026-27ನೇ ಸಾಲಿನ ಕರ್ನಾಟಕ ಗ್ರಾಮ ಸುರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ಅಡಿಯಲ್ಲಿಯ ಜರುಗಿದ ವಿಶೇ ಷ ಗ್ರಾಮ ಸಭೆಯಲ್ಲಿ ಮಾತನಾಡಿದರು.

ಯುವಕರು ಮತ್ತು ಗುರು-ಹಿರಿಯರಲ್ಲಿ ತಪ್ಪುಗಳನ್ನು ಖಂಡಿಸುವ ಗುಣ ಕಡಿಮೆಯಾಗುತ್ತಿದೆ. ಇದರಿಂದ ಗ್ರಾಮದಲ್ಲಿನ ಸ್ವರಾಜ್ ಕಲ್ಪನೆ ನನಸಾಗುತ್ತಿಲ್ಲ. ಜನರು ಜಾಗೃತರಾದಾಗ ಪಂಚಾಯತ್ ರಾಜ್ ಆಡಳಿತ ಸನ್ಮಾರ್ಗದಲ್ಲಿರುತ್ತದೆ ಎಂದರು.

ವಾರ್ಡ್ ಸಭೆ, ಜನವಸತಿ ಸಭೆ ಗ್ರಾಮಸಭೆಗಳಲ್ಲಿ ಪಾಲ್ಗೊಳ್ಳಬೇ ಕು ಮತ್ತು ಇವುಗಳ ಮಹತ್ವ ತಿಳಿಯಬೇ ಕು. ಗ್ರಾಮಸಭೆಗಳ ನಿರ್ಣ ಯಗಳನ್ನು ತಿರಸ್ಕರಿಸುವ ಅಧಿಕಾರಯಾರಿಗೂ ಇಲ್ಲ. ಗ್ರಾಮಸಭೆಗಳಲ್ಲಿ ಭಾಗವಹಿಸಿ ಮುಂದಿನ ಐದು ವರ್ಷಗಳ ಆದ್ಯತೆ ಮತ್ತು ಫಲಾನುಭವಿಗಳ ಪಟ್ಟಿ ಸಿದ್ದಪಡಿಸಿಯೋ ಗ್ಯರಿಗೆ ಸರಕಾರಿ ಲಾಭ ತಲುಪುವಂತೆ ಜನಸಾಮಾನ್ಯರು ಪ್ರಯತ್ನಿಸಬೇಕು. ಗ್ರಾಮ ನೈರ್ಮಲ್ಯಗಳಲ್ಲಿ ಪಾಲ್ಗೊಂಡು ಗಾಂಧಿ ಕನಸಿನಂತೆ ಗ್ರಾಮ ಸ್ವರಾಜ್ಯವನ್ನು ರಾಮರಾಜ್ಯ ಮಾಡಬೇಕಿದೆ ಎಂದರು.

ರೋಣ ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ ಮಾತನಾಡಿ, ಗ್ರಾಮಾಡಳಿತ ಅಂದರೆ ಸ್ಥಳೀಯ ಸರ್ಕಾರವಾಗಿದೆ ಇದಕ್ಕೆ ಹೆಚ್ಚಿನ ಅಧಿಕಾರವಿರುತ್ತದೆ.ಗಾಂ ಧಿಯವರ ಗ್ರಾಮ ಸ್ವರಾಜ್ ಮತ್ತು ಸ್ವಚ್ಛ ಭಾರತ ನಿರ್ಮಿ ಸಲು ಪ್ರಜ್ಞಾವಂತರು ಶ್ರಮಿಸಬೇ ಕು. ಸದ್ಬುದ್ಧಿ, ಸದ್ವಿಚಾರ, ಸದ್ಬೋ ಧನೆಗಳಮೂಲಕ ಗಾಂಧಿ ಕನಸನ್ನು ನನಸಾಗಿಸೋಣ. ಪಂಚಾಯತ್ ರಾಜ್ ಸಂ ಸ್ಥೆಗಳಲ್ಲಿ ಪಾರದರ್ಶ ಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವಮೂಲಕ ವಿಕೇಂದ್ರೀ ಕೃತಯೋಜನೆ, ನೈಜ ಪ್ರಗತಿ, ಕೆಲಸ ಆಧಾರಿತ ಲೆಕ್ಕಪತ್ರ ನಿರ್ವ ಹಣೆಯನ್ನು ಬೆಂಬಲಿಸೋಣ ಎಂದರು.

ರೋಣ ತಾಲ್ಲೂಕು ಇಒ ಚಂದ್ರಶೇಖರ ಕಂದಕೂರ, ಬಸವರಾಜ ಪಲ್ಲೇದ,ರಾಮಣ್ಣ ಬಸವರಡ್ಡೇರ, ಸುರೇಶ ಬಸವರಡ್ಡೇರ, ಬಸವರಾಜ ವೀರಾಪೂರ, ವಿ.ಬಿ.ಸೋ ಮನಕಟ್ಟಿಮಠ, ಸಿ.ಕೆ.ಮಾಳಶೆಟ್ಟಿ, ಬಸವರಾಜ ತಳವಾರ, ಪಿ.ಡಿ.ಓ. ಲೋಹಿತ್ ಎಂ,ಲಲಿತಾ ರಾಥೋಡ, ಗುರಣ್ಣ ಅವರಡ್ಡಿ, ಎಚ್.ಡಿ. ದ್ವಾಸಲ ಹಿತೈಷಿಗಳು ಇದ್ದರು.

# ಸೈಬರ್ ವಂಚನೆಯಿಂದ ಜನ ಜಾಗೃತರಾಗಿ : ಡಿವೈಎಸ್ಪಿ ಸಿದ್ದಲಿಂಗನಗೌಡ ಪಾಟೀಲ್ ಸೂಚನೆ

❑ ಸ್ನೇಹಜೀವಿ ನ್ಯೂಸ್

**ಕೊಪ್ಪಳದಲ್ಲಿ ಹಮ್ಮಿಕೊಂಡಿದ್ದ ಸೈಬರ್ ಕೆಂ ಜಾಗೃತಿ ಕಾರ್ಯಾಗಾರದಲ್ಲಿ ಡಿವೈ-ಎಸ್ಪಿ ಸಿದ್ದಲಿಂಗನಗೌಡ ಮಾಹಿತಿ ನೀಡಿದರು. ಜಿಲ್ಲಾ ಎನ್ ಐಸಿ ಅಧಿಕಾರಿ ಬಸವರಾಜ, ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ, ಸಲೀಂ ಹಾಗೂ ವಿವಿಧ ಇಲಾಖೆ ಅಧಿಕಾರಿಗಳಿದ್ದರು.**



ಕೊಪ್ಪಳ : ಸೈಬರ್ ಸುರಕ್ಷತೆ ಪೊಲೀಸರ ಜವಾಬ್ದಾರಿ ಮಾತ್ರವಲ್ಲ. ಪ್ರತಿಯೊಬ್ಬ ನಾಗರಿಕ ಮತ್ತು ಅಧಿಕಾರಿ, ಸಿಬ್ಬಂದಿ ಜಾಗೃತರಾಗಬೆಕು. ಡಿಜಿಟಲ್ ಜಗತ್ತಿನಲ್ಲಿ "ತಡೆ, ಯೋಚನೆ, ನಂತರ ಕ್ರಮ' ಎಂಬ ನೀತಿ ಅನುಸ-ರಿಸಿದರೆ ಮೋಸದಿಂದ ತಪ್ಪಿಸಿಕೊಳ್ಳಬಹುದು ಎಂದು ಜಿಲ್ಲಾ ಸೈಬರ್ ಕೆಂ ಡಿವೈಎಸ್ಪಿ ಸಿದ್ದಲಿಂಗನಗೌಡ ಪಾಟೀಲ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋ-ರಿಯಂ ಸಭಾಂಗಣದಲ್ಲಿ ಮಂಗಳವಾರ ಸುರಕ್ಷಿತ ಅಂತರ್ಜಾಲ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಆನ್‌ಲೈನ್ ಬ್ಯಾಂಕಿಂಗ್, ಸಾಮಾಜಿಕ ಜಾಲತಾಣ ಮತ್ತು ಇ-ಕಾಮರ್ಸ್ ಬಳಕೆ ಹೆಚ್ಚಿದಂತೆ ಮೋಸಗಾರರು ಹೆಚ್ಚುತ್ತಿದ್ದಾರೆ. ನಮ್ಮ ಕೊಪ್ಪಳ ಸುತ್ತಮುತ್ತ ಸೈಬರ್ ಪ್ರಕರಣಗಳು ಹೆಚ್ಚುತ್ತಿವೆ. ಅವುಗಳಿಂದ ಜಾಗೃತರಾಗಿ. ಸೈಬರ್ ಕೆಂನಿಂದ ತಪ್ಪಿಸಿಕೊಳ್ಳಲು ಬಲವಾದ ಪಾಸ್ ವರ್ಡ್ ಬಳಸಿ. ಅನಾಮಧೇಯ ಲಿಂಕ್ ಅಥವಾ ಆಪ್ ಡೌನ್‌ಲೋಡ್ ಮಾಡಬೇಡಿ. ವೈಯಕ್ತಿಕ ಮಾಹಿತಿ ಸಾಮಾಜಿಕ ಜಾಲತಾಣದಲ್ಲಿ ಹಂಚಬೇಡಿ. ಹಣ ವರ್ಗಾವಣೆಗೂ ಮೊದಲು ಖಚಿತಪಡಿಸಿಕೊಂಡು ವರ್ಗಾಯಿಸಿ ಎಂದರು.

ಮೊಬೈಲ್, ಇಂಟರ್ನೆಟ್‌ನಿಂದ ನಮಗೆ ಲಾಭ-ನಷ್ಟ ಎರಡು ಇದೆ. ಅವುಗಳನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳುತ್ತೇವೆ ಎಂಬುವುದು ಮುಖ್ಯ. ಪ್ರತಿಯೊಬ್ಬರೂ ಸೈಬರ್ ಅಪರಾಧಗಳ ಕುರಿತು ತಿಳಿಯಬೇಕು. ಮನುಷ್ಯನಿಗೆ ಅತಿ ಆಸೆ ಮತ್ತು ಭಯ ಸೈಬರ್ ಕೆಂಗೆ ದಾರಿಯಾಗುತ್ತದೆ. ಮೊಬೈಲ್ ಕರೆಗಳ ಮೂಲಕ ಸೂಕ್ಷ್ಮ ವಿವರಗಳಾದ ಒಟಿಪಿ, ಆಧಾರ್ , ಪ್ಯಾನ್ ಅಥವಾ ಬ್ಯಾಂಕ್ ಮಾಹಿತಿಯನ್ನು ಎಂದಿಗೂ ಬಹಿರಂಗಪಡಿಸಬಾರದು. ಅನಧಿಕೃತ ಆಧಾರ್ ಪಾವತಿ ಅಧಿಸೂಚನೆಗಳ ಬಗ್ಗೆ ಜಾಗರೂಕರಾಗಿರಿ. ವೈಯಕ್ತಿಕ ಮಾಹಿತಿ ಅಥವಾ ಹಣಕ್ಕಾಗಿ ವಿನಂತಿಸುವ ಅಪ-ರಿಚಿತ ದೂರವಾಣಿ ಸಂಖ್ಯೆಗಳಿಂದ ಬರುವ ಕರೆಗಳಿಗೆ ಎಂದಿಗೂ ಪ್ರತಿಕ್ರಿಯಿಸಬಾರದು ಎಂದು ಮಾಹಿತಿ ನೀಡಿದರು.

ಜಿಲ್ಲಾ ಎನ್‌ಐಸಿ ಅಧಿಕಾರಿ ಬಸವರಾಜ, ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ, ಸಲೀಂ ಹಾಗೂ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

**ಸೈಬರ್ ಮೋಸವಾದರೆ ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಿ ಅಥವಾ ಮೋಸ ಹೋದ ಒಂದು ಗಂಟೆಯೊಳಗಾಗಿ ಹತ್ತಿರದ ಪೊಲೀಸ್ ಠಾಣೆಗೆ ಭೇಟಿ ನೀಡಿ ದೂರು ದಾಖಲಿಸಬೇಕು. ಇದರಿಂದ ಹಣ ವಾಪಸ್ ಪಡೆಯುವ ಸಾಧ್ಯತೆ ಹೆಚ್ಚು. ಆದಷ್ಟು ಜಾಗೃತರಾಗಿ ವ್ಯವಹರಿಸುವುದು ಒಳಿತು. ಅಪರಿಚಿತ ಕರೆ, ಚಾಟಿಂಗ್‌ಗೆ ಸ್ಪಂದಿಸಬೇಡಿ.**

**ಸಿದ್ದಲಿಂಗನಗೌಡ ಪಾಟೀಲ್.**
ಸೈಬರ್ ಕೆಂ ಡಿವೈಎಸ್ಪಿ ಕೊಪ್ಪಳ.

Snehajeevi Kannada Daily, Printed and Published and owned by ABDULHAMEED SHALAGAR House No. 6421 Rajput Oni, Betageri-Gadag, State : Karnataka
Editor : ABDULHAMEED SHALAGAR, Printed at : Prabhu Graphics, 3094A, Station Road Gadag, District Gadag 582 101 State : Karnataka